

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT



ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119



Volume : 07 Issue : 114 Tuesday 07-01-2025 E-mail : maruti.b.hosamani76@gmail.com Page: 4 Price : Rs. 1/-


## ನವ ವಧು ವರರಿಗೆ ಗಿಡಗಳನ್ನು ಉಡುಗೊರೆಯಾಗಿ ನೀಡುವ ಮೂಲಕ ಪರಿಸರವನ್ನು ಬೆಳೆಸೋಣ: ಡಾ. ರೂಪ ಶ್ರೀ ಬಿ.ವೈ ಅಭಿಮತ



**ಚಿತ್ರದುರ್ಗ** : ಬಸವ ಕೇಂದ್ರ ಶ್ರೀ ಜಗದ್ಗುರು ಮುರುಘ ರಾಜೇಂದ್ರ ಬೃಹನ್ಮಠ ಚಿತ್ರದುರ್ಗದಲ್ಲಿ ನಡೆದ ಮೂವತ್ತೈದನೆಯ ವರ್ಷದ ಮೊದಲನೇಯ ತಿಂಗಳ ಸಾಮೂಹಿಕ ವಿವಾಹ ಕಲ್ಯಾಣೋತ್ಸವದಲ್ಲಿ ಮುಖ್ಯ ಅಥಿತಿಗಳಾಗಿ ಚಿತ್ರದುರ್ಗ ಜಿಲ್ಲೆಯ ಖ್ಯಾತ ಹೆರಿಗೆ ಮತ್ತು ಪ್ರಸೂತಿ ತಜ್ಞರು ಆದ ಶ್ರೀಮತಿ ಡಾ.ರೂಪಶ್ರೀ ಬಿ.ವೈ ಮಾತನಾಡಿ ಇಂದಿನ ದಿನಗಳಲ್ಲಿ ಸಾಮೂಹಿಕ ವಿವಾಹದಲ್ಲಿ ಭಾಗಿ ಯಾಗುವವರ ಸಂಖ್ಯೆ ಕಡಿಮೆ ಆಗಿದೆ. ಕಾರಣ ಜಿಲ್ಲೆಯಲ್ಲಿ ಅತೀ ಹೆಚ್ಚು ಗ್ರಾಮೀಣ ಪ್ರದೇಶದಲ್ಲಿ ಬಾಲ್ಯ ವಿವಾಹಗಳು ಹೆಚ್ಚುತ್ತಿವೆ ಅಲ್ಲದೆ ಕೆಲವು ಪಟ್ಟ ಭದ್ರ ಹಿತಾಸಕ್ತಿಗಳಿಗೆ ಒಳಪಟ್ಟು ತಂದೆ ತಾಯಿಗಳಿಗೆ

ಮಾಹಿತಿ ಇಲ್ಲದೆ ಅತೀ ಚಿಕ್ಕ ವಯಸ್ಸಿನಲ್ಲಿ ಪ್ರೇಮ ವಿವಾಹವಾಗಿ ಕುಟುಂಬದವರ ಆಸರೆ ಇಲ್ಲದೆ ಅದೆಷ್ಟೋ ಜೀವಗಳು ತಮ್ಮ ಜೀವನವನ್ನು ರೂಪಿಸಿ ಕೊಳ್ಳುವ ಹದಿ ಹರೆಯದ ವಯಸ್ಸಿನಲ್ಲಿ ಎಡವಿ ಮುಂದೆ ಜೀವನದಲ್ಲಿ ಬಾಳಿ ಬದುಕಿ ತಂದೆ ತಾಯಿಗಳನ್ನು ಸಾಕಿ ಸಲುಹುವ ಮುನ್ನವೇ ಆತ್ಮ ಹತ್ಯೆಗೆ ಶರಣಾಗುತ್ತಿದ್ದಾರೆ ಎಂದು ಕಳವಳ ವ್ಯಕ್ತಪಡಿಸಿದರು.

ಈ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಡಾ ಬಸವ ಕುಮಾರ ಸ್ವಾಮಿಗಳು ವಹಿಸಿ ಮಾತನಾಡಿ ಈ ರೀತಿಯ ಸರಳ ಸಾಮೂಹಿಕ ಕಲ್ಯಾಣ ಮಹೋತ್ಸವದಲ್ಲಿ ವಿವಾಹವಾದರೆ ಕುಟುಂಬಕ್ಕೆ ಹೊರೆಯಾಗದೆ ಸಾಲಮುಕ್ತ ನೆಮ್ಮದಿ ಜೀವನ ಸಾಗಿಸಬಹುದು ಎಂದು ಆಶಯ ವ್ಯಕ್ತಪಡಿಸಿದರು,

ಈ ಸಂದಭರ್ದಲ್ಲಿ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಆದ ಶ್ರೀ ಕೆ.ಎಂ ವಿರೇಶ್, ಡಾ, ಶ್ರೀ ಬಸವ ಪ್ರಭುಸ್ವಾಮಿಜಿ, ಹೆರಿಗೆ ಮತ್ತು ಪ್ರಸೂತಿ ತಜ್ಞರು ಆದ ಡಾ, ರೂಪಶ್ರೀ.ಬಿ.ವೈ ಕೌನ್ಸಿಲರ್ ಮಂಜುನಾಥ್, ಕಣಿವೆ ಮಾರಮ್ಮ ದೇವಸ್ಥಾನ ಸಮಿತಿ ಅಧ್ಯಕ್ಷರಾದ ಕೆಂ.ಎಂ ತಿಪ್ಪೇಸ್ವಾಮಿ, ಡಾ, ಮೇಘನಾ ಮೂರ್ತಿ ಬಿ.ಓ, ರುದ್ರಮುನಿ, ಇತರೆ ಭಕ್ತಾದಿಗಳು ಉಪಸ್ಥಿತರಿದ್ದರು.

**ವರದಿ : ಕೋಡಿಹಳ್ಳಿ.ಟಿ.ಶಿವಮೂರ್ತಿ.ಚಿತ್ರದುರ್ಗ**

## ಶ್ರೀರಾಮ್ ಫೈನಾನ್ಸ್ ಲಿ.ನಿಂದ 1550 ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ಪ್ರಧಾನ

**ಸಿಹಿ ಕಹಿ ಸುದ್ದಿ,**

**ಹೊಸಪೇಟೆ** : ಜೀವನನ್ನು ಕೆಟ್ಟತನದಿಂದ ಕಟ್ಟಿ–ಕೊಂಡರೆ ಅದು ಸಾರ್ಥಕ ವಾಗುವುದಿಲ್ಲ. ನಮ್ಮ ನಡೆ, ನುಡಿ, ಕಾರಿತ್ರೆ ಸರಿಯಾಗಿದ್ದು ಸಮಾಜದಲ್ಲಿ ಒಳ್ಳೆ ತನದಿಂದ ಬದುಕಬೇಕು ಆಗ ಮಾತ್ರ ನಮ್ಮ ಜೀವನ ಸಾರ್ಥಕ ವಾಗುವುದು ಎಂದು ಶ್ರೀ ನಿರಂಜನ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು ಕೊಟ್ಟೂರು ಸಂಸ್ಥಾನಮಠ ಹೊಸಪೇಟೆ ವಿದ್ಯಾರ್ಥಿಗಳಿಗೆ ಪ್ರವಚನ ನೀಡಿದರು.



ನಗರದ ಸಾಯಿಬಾಬಾ ಸರ್ಕಲ್ ಬಳಿ ಇರುವ ಸಾಯಿಲೀಲಾ ರಂಗಮಂದಿರ ಕಲ್ಯಾಣ ಮಂಟಪದಲ್ಲಿ ಶ್ರೀರಾಮ್ ಫೈನಾನ್ಸ್ ಲಿಮಿಟೆಡ್ ಹೊಸಪೇಟೆ ಇವರ ಪ್ರಾಯೋಜಕತ್ವದಲ್ಲಿ, ಶ್ರೀರಾಮ್ ಫೌಂಡೇಶನ್ ವತಿಯಿಂದ ವಿದ್ಯಾರ್ಥಿ ಪ್ರೋತ್ಸಾಹ ಧನ ವಿತರಣಾ ಸಮಾರಂಭದಲ್ಲಿ ಸಾನಿಧ್ಯ ವಹಿಸಿ ಮಾತನಾಡಿದಅವರುಶ್ರೀರಾಮ್‌ಫೈನಾನ್ಸ್‌ನವರುವಿದ್ಯಾರ್ಥಿ ಪ್ರೋತ್ಸಾಹ ಧನ ಕೊಡುತ್ತಿರುವುದು ಹೆಮ್ಮೆಯ ವಿಷಯ ವಿದ್ಯಾರ್ಥಿಗಳು ಈ ಹಣವನ್ನುಬೇರೆ ಯಾವುದಕ್ಕೆ ಖರ್ಚು ಮಾಡದೆ ವಿದ್ಯಾಭ್ಯಾಸಕ್ಕಾಗಿ ಉಪಯೋಗಿಸಿ ಕೊಳ್ಳಬೇಕು. ಒಳ್ಳೆಯ ಶಿಕ್ಷಣದಿಂದ ಈ ದೇಶ ಅಭಿವೃದ್ಧಿಯಾಗಲು ಸಾಧ್ಯ. ಶಿಕ್ಷಣವು ಒಳ್ಳೆಯದಕ್ಕೆ ಬಳಕೆಯಾಗ ಬೇಕೇ ಹೊರತು ದೇಶದ ನಾಶಕ್ಕೆ ಬಳಸಬಾರದು. ವಿದ್ಯಾರ್ಥಿಗಳು ಮನಸ್ಸಿನಲ್ಲಿ ಒಳ್ಳೆಯ ಭಾವನೆಗಳನ್ನು ಬೆಳೆಸಿಕೊಂಡು ಸಮಾಜದಲ್ಲಿ ಅತ್ಯುತ್ತಮ ನಾಗರಿಕರಾಗ ಬೇಕು, ಮನೆಯಲ್ಲಿ ನಿಮ್ಮ ತಂದೆ ತಾಯಿಯವರು ನಿಮ್ಮ ವಿದ್ಯಾಭ್ಯಾಸ ಮತ್ತು ಭವಿಷ್ಯಕ್ಕೋಸ್ಕರ ಅವರು ಪಡುತ್ತಿರುವ ಕಷ್ಟವನ್ನು ಅರಿತು ಅವರನ್ನು ಗೌರವಿಸುತ್ತಾ ಅವರಲ್ಲಿರುವ ಗುಣಗಳನ್ನು ಆದರ್ಶವನ್ನಾಗಿಟ್ಟು ಕೊಂಡು ಮುಂದುವರಿಯಬೇಕು. ಸಮಾಜದಲ್ಲಿ ಎಲ್ಲಾ ಅಧಿಕಾರಿಗಳು ಭ್ರಷ್ಟಾಚಾರಿ ಗಳಾಗಿದ್ದಾರೆ ಎಂದು ವ್ಯಥೆ ಪಡುವುದಕ್ಕಿಂತ ಶಿಕ್ಷಣ ಪಡೆದು ಉನ್ನತ ಸ್ಥಾನಗಳಿಗೆ ನೀವು ಹೋಗಿ ಒಳ್ಳೆಯ ವ್ಯಕ್ತಿಯಾಗಿ ಸಮಾಜಕ್ಕೆ ಒಳಿತನ್ನು ಮಾಡುವ ಕೆಲಸ ಮಾಡಿದಾಗ ಜೀವನ ಸಾರ್ಥಕವಾಗುತ್ತದೆ ಎಂದು ವಿದ್ಯಾರ್ಥಿಗಳಿಗೆ ಮಾದರಿಯ ಕಿವಿ ಮಾತುಗಳನ್ನು ಹೇಳಿದರು. ಶ್ರೀರಾಮ್ ಫೈನಾನ್ಸ್ ನವರು ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ಕೊಡುತ್ತಿರುವುದು ತುಂಬಾ ಹೆಮ್ಮೆಯ ವಿಷಯ ಇಂದಿನ ಕೆಲವು ಕಂಪನಿಗಳು ಉದ್ಯಮ ಮಾಡಿಕೊಂಡು ಲಾಭಾಂಶವನ್ನು ತಮ್ಮಲ್ಲಿಯೇ ಇಟ್ಟುಕೊಳ್ಳುವಂತಹ ಪರಿಸ್ಥಿತಿಯಲ್ಲಿ ಶ್ರೀರಾಮ್ ಕಂಪನಿಯ ಕಾರ್ಯ ಶ್ಲಾಘನಿಯ ಎಂದರು.

ಅಬ್ದುಲ್ ರಹಿಮಾನ್ ಎ. ನಂದಗಾದಿ 3 ನೇ. ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹೊಸಪೇಟೆ ಇವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ಶ್ರೀರಾಮ್ ಫನಾನ್ಸ್ ನವರು ವಿದ್ಯಾರ್ಥಿಗಳ ಪ್ರೋತ್ಸಾಹ ಕಾರ್ಯಕ್ರಮಕ್ಕೆ ನಮ್ಮನ್ನುಆಹ್ವಾನಿಸಿ ಮಾತನಾಡಲುಅವಕಾಶಕೊಟ್ಟಿರುವುದು ಹೆಮ್ಮೆಯ ವಿಷಯ, ಶ್ರೀರಾಮ್ ಫೈನಾನ್ಸ್ ಕಂಪನಿಯು ಯುವಕರಿಗೆ ಉದ್ಯೋಗ ಅವಕಾಶಗಳನ್ನು ಸೃಷ್ಟಿಸಲು ಮತ್ತು ಅವಶ್ಯಕತೆ ಇರುವವರಿಗೆ ವಿವಿಧ ರೂಪದ ಸಾಲ ಸೌಲಭ್ಯ ಕೊಡುತ್ತಿರುವುದು. 2013 ರಿಂದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ಕೊಡುತ್ತಿರುವುದು, 50 ವರ್ಷಗಳಿಂದ ಕಂಪನಿಯು ಯಶಸ್ವಿಯಾಗಿ ಸಾಗುತ್ತಿರುವುದು ಶ್ಲಾಘನೀಯ, ಶಿಕ್ಷಣ ನಿಮ್ಮ ಹಕ್ಕು, ಇಲ್ಲಿ ಶಿಕ್ಷಣಕ್ಕಾಗಿ ಪ್ರೋತ್ಸಾಹಿಸುತ್ತಿದ್ದಾರೆ ಎನ್ನುವುದರಲ್ಲಿ ಅನುಮಾನವೇ ಇಲ್ಲ, ವಿದ್ಯಾವಂತರು ವಿದ್ಯಾರ್ಥಿಗಳ ಪ್ರೋತ್ಸಾಹಕ್ಕೆ ಪ್ರೋತ್ಸಾಹ ಕೊಡುತ್ತಿದ್ದಾರೆ ಫನಾನ್ಸ್ ನವರು ವಿದ್ಯಾರ್ಥಿಗಳನ್ನು ಈ ದೇಶದ, ಸಮಾಜದ ಪಿಲ್ಲರ್ ಗಳಂತೆ ಹೊರಹೋಮ್ಮಿ ಒಳ್ಳೆಯ ವ್ಯಕ್ತಿಗಳಾಗುತ್ತಾರೆ ಎಂದು ನಂಬಿದ್ದೇನೆ ಎನ್ನುತ್ತಾ ವಿದ್ಯಾರ್ಥಿಗಳಿಗೆ ಸ್ಫೂರ್ತಿ ದಾಯಕ ಮಾತುಗಳನ್ನಾಡಿದರು. ನನ್ನ ವೈಯಕ್ತಿಕವಾಗಿ ಹೇಳುವುದಾದರೆ ಸ್ವಾಮೀಜಿಯವರ ವ್ಯಕ್ತಿತ್ವ ತುಂಬಾ ಸ್ಫೂರ್ತಿ ದಾಯಕವಾಗಿದೆ ಎಂದು ನಿರಂಜನ ಜಗದ್ಗುರುಗಳ ಕುರಿತು ಶ್ಲಾಘನಿಯ ವ್ಯಕ್ತಪಡಿಸಿದರು.

ಪ್ರಾಸ್ತಾವಿಕವಾಗಿ ವಿಜಯ್ ಕುಮಾರ್ ಪಿ.ಜಿ ಶ್ರೀರಾಮ್ ಫೈನಾನ್ಸ್‌ಲಿ.ನ ಸ್ಟೇಟ್ ಹೆಡ್, ಇನ್ವೆಸ್ಟ್ಮೆಂಟ್ ಮತ್ತು ಇನ್ಸೂರೆನ್ಸ್ ವಿಭಾಗ ಇವರು ಮಾತನಾಡಿ ಶ್ರೀರಾಮ್ ಫೈನಾನ್ಸ್ 51 ವರ್ಷಗಳಿಂದ ವಿವಿಧ ಕ್ಷೇತ್ರಗಳಲ್ಲಿ ಉದ್ಯಮ ಪ್ರಾರಂಭಿಸಿ, ಟ್ರಕ್ ಗಳ ಮೇಲೆ ಸಾಲವನ್ನು ಕೊಡುತ್ತಿದ್ದು, ಚಾಲಕರ ಕುಟುಂಬಕ್ಕೆ ಏನಾದರು ಸಹಾಯ ಮಾಡಬೇಕು ಎಂದು ನಿರ್ಧರಿಸಿ ಸಂಸ್ಥೆಯಿಂದ 2013 ರಲ್ಲಿ ಶ್ರೀರಾಮ್ ಫೌಂಡೇಶನ್ ಎಂಬ ಚಾರಿಟೇಬಲ್ ಸಂಸ್ಥೆ ಸ್ಥಾಪಿಸಿ ಇದರ ಮುಖಾಂತರ ಚಾಲಕರ ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಧನ ಕೊಡುತ್ತಾ ಬಂದಿದೆ. ಪ್ರತೀ ವರ್ಷ ದೇಶದ ಅನೇಕ ಪ್ರದೇಶಗಳಿಂದ 30,000 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಇದರ ಪ್ರಯೋಜನೆ ಪಡೆದಿದ್ದಾರೆ. ಇಂದು ಬಳ್ಳಾರಿ , ಕೊಪ್ಪಳ, ವಿಜಯನಗರ ಮೂರು ಜಿಲ್ಲೆಯ 1550 ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ 67 ಲಕ್ಷ ಪ್ರೋತ್ಸಾಹ ಧನ ಕೊಡುತ್ತಿದ್ದು. ಮುಂದಿನ ದಿನಗಳಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಕೊಡಲಾಗುವುದು. ವಾಹನ ಚಾಲಕರ ಮಕ್ಕಳು ಈ ಪ್ರೋತ್ಸಾಹ ಧನಕ್ಕೆ ಪಡೆಯಲು ಇಚ್ಚಿಸಿದರೆ ಕಛೇರಿಗೆ ಸಂಪರ್ಕಿಸಿ ಅರ್ಜಿ ಕೊಡಬಹುದು. ಇದಕ್ಕೆ ಕೇಲವು ಷರತ್ತುಗಳಿದ್ದು 7 ನೇ. ತರಗತಿಯಲ್ಲಿ ಶೇ 60% ಅಂಕ ಪಡೆದು 8 ನೇ. ತರಗತಿಯಲ್ಲಿ ಓದುತ್ತಿರಬೇಕು ಅಂತವರಿಗೆ ಪ್ರತೀ ವರ್ಷ 5,000 ರೂ. ಕೊಡಲಾಗುವುದು. ಈ ಯೋಜನೆಯನ್ನು 8 ರಿಂದ 12 ನೇ. ತರಗತಿಯವರೆಗೆ ಶೇ 60% ಅಂಕ ತೆಗೆದು ಕೊಂಡ ಮಕ್ಕಳಿಗೆ ಪ್ರತಿ ವರ್ಷ ಕೊಡುತ್ತಿದ್ದೇವೆ. ಫೈನಾನ್ಸ್ ನಲ್ಲಿ ವಾಹನಗಳ ಮೇಲೆ ಮತ್ತು ವಿವಿಧ ರೀತಿಯ ಸಾಲ ಸೌಲಭ್ಯವಿದೆ. ಗ್ರಾಹಕಾರ ಅನುಕೂಲಕ್ಕೆ ಶ್ರೀರಾಮ ಒನ್ ಮೊಬೈಲ್ ಅಪ್ಲಿಕೇಶನ್ ಬಿಡುಗಡೆ ಮಾಡಲಾಗಿದೆ ಅದರ ಸದುಪಯೋಗ ಪಡಿಸಿ. ಕೊಳ್ಳಬಹುದು ಎಂದರು.

" ವೇದಿಕೆ ಮೇಲೆ ಸಾವಿರಾರು ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ಹಾಗೂ ಪ್ರಶಸ್ತಿ ಪತ್ರ ಪ್ರಧಾನ ಮಾಡಲಾಯಿತು ".

ಈ ಸಂದರ್ಭದಲ್ಲಿ ಸಭೆ ಅಧ್ಯಕ್ಷತೆ ವಹಿಸಿದ್ದ ಶ್ರೀಧರ ಮಠ ಎಕ್ಸಿಕ್ಯೂಟಿವ್ ಡೈರೆಕ್ಟರ್, ಮುಖ್ಯ ಅತಿಥಿಗಳಾಗಿ ಡಾಕ್ಟರ್ ಟಿ ಮಂಜುನಾಥ ಪೊಲೀಸ್ ಉಪಾಧೀಕ್ಷಕರು ಹೊಸಪೇಟೆ, ವೆಂಕಟೇಶ ರಾಮಚಂದ್ರಪ್ಪ ಉಪ ನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ ವಿಜನಗರ ಜಿಲ್ಲೆ, ಚನ್ನನ ಗೌಡ ಜೋನಲ್ ಬಿಜಿನೆಸ್ ಹೆಡ್, ರಾಘವೇಂದ್ರ ಟಿ ಆರ್ ಬಳ್ಳಾರಿ ಕ್ಲಸ್ಟರ್ ಹೆಡ್, ಪಂಪ ವಿರೂಪಾಕ್ಷ ಸ್ಟೇಟ್ ಕಲೆಕ್ಷನ್ ಹೆಡ್ ಇದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮಾಲತೇಶ್.ಶೆಟ್ಟರ್.ಹೊಸಪೇಟೆ**

## ಸ್ಪರ್ಧೆಯಲ್ಲಿ ಸೋಲು–ಗೆಲುವು ಸಮಾನವಾಗಿ ಸ್ವೀಕರಿಸಿ: ಸೋಮು. ನಾಗರಾಜ



**ರೋಣ** : ಗ್ರಾಮೀಣ ಭಾಗಗಳಲ್ಲಿ ಇಂತಹ ಸ್ಪರ್ಧೆಗಳು ನಶಿಸಿ ಹೋಗುತ್ತಿವೆ. ಗ್ರಾಮೀಣ ಪ್ರದೇಶದ ಸ್ಪರ್ಧೆಗಳಾದ ಟಗರಿನ ಕಾಳಗ ನಡೆಸುತ್ತಿರುವುದು ಶ್ಲಾಘನೀಯ. ಸ್ಪರ್ಧೆಯಲ್ಲಿ ಸೋಲು–ಗೆಲುವು ಸಮಾನವಾಗಿ ಸ್ವೀಕರಿಸಬೇಕು ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ತಾಲೂಕು ಸಂಚಾಲಕ ಸೋಮು ನಾಗರಾಜ ಹೇಳಿದರು.

ತಾಲೂಕಿನ ನಾಗರಾಳ ಗ್ರಾಮದಲ್ಲಿ ಎಳ್ಳು ಅಮವಾಸ್ಯೆ ಹಾಗೂ ಹೊಸ ವರ್ಷದ ಅಂಗವಾಗಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಹಾಗೂ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಹಮ್ಮಿಕೊಂಡಿದ್ದ ಹೊನಲು ಬೆಳಕಿನ ಟಗರಿನ ಕಾಳಗದ. ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ದಲಿತ ಯುವ ಮುಖಂಡರ ಅಂದಪ್ಪ ಮಾದರ ಮಾತನಾಡಿ ಇಂದಿನ ಯುವಕರು ಗ್ರಾಮೀಣ ಪ್ರದೇಶದ ಕ್ರೀಡೆಗಳಿಗೆ ಹೆಚ್ಚು ಪ್ರೋತ್ಸಾಹ ನೀಡಬೇಕು. ಇಂತಹ ಕ್ರೀಡೆಗಳನ್ನು ಉಳಿಸಿ ಬೆಳಸುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯ. ಅಂ–ದಾಗ ಮಾತ್ರ ದೇಶಿ ಕ್ರೀಡೆಗಳು ಉಳಿಯಲು ಸಾಧ್ಯ ಎಂದರು.

ಇದೇ ಸಂದರ್ಭದಲ್ಲಿ ಕೃಷ್ಣಾ.ಜಿ ದೇಶಪಾಂಡೆ, ಶಿವನಗೌಡ ಸಿದ್ದನಗೌಡ್ರು, ಗುರುನಾಥ ದೇಶಪಾಂಡೆ ಸತ್ಯಪ್ಪ.ಮಾದರ ಸೇರಿದಂತೆ ಸಮಾಜದ ಮುಖಂಡರು ಹಾಗೂ ಯುವಕರು ಹಾಜರಿದ್ದರು.

## ಸತ್ಯನಾರಾಯಣ ಪೂಜೆಯಿಂದ ಪಾಪ ನಾಶವಾಗಿ ಪುಣ್ಯ ಲಭಿಸುತ್ತದೆ ನಾಗರತ್ನ ಹೆಗಡೆ

**ಹಳ್ಳೂರ** : ಪಾಪ ನಾಶವಾಗಿ ಪುಣ್ಯ ಪ್ರಾಪ್ತಿಯಾಗುವುವ ಸಲುವಾಗಿ ಹಿಂದೆ ಪೂಜೆ ಯಜ್ಞ ಯಾಗಾದಿಗಳನ್ನು ಮಾಡುತ್ತಿದ್ದರು. ಸಾಮೂಹಿಕ ಸತ್ಯನಾರಾಯಣ ಪೂಜೆ ಮಾಡುವದ–ರಿಂದ ದನ ಕರುಗಳಿಗೆ,ಮನುಷ್ಯರಿಗೆ ರೋಗ ರುಜಿನಗಳು ಬರುವದಿಲ್ಲ ಮತ್ತು ಮಳೆ ಬೆಳೆ ಚೆನ್ನಾಗಿ ಆಗಿ ಸುಖಃ ಶಾಂತಿ ನೆಮ್ಮದಿ ದೊರೆಯುತ್ತದೆ.ಧರ್ಮಸ್ಥಳಗ್ರಾಮಾಭಿವೃದ್ಧಿ ಯೋಜನೆ 14 ವರ್ಷಗಳಿಂದ ಪೂಜೆ ದಾರ್ಮಿಕ ಕಾರ್ಯಗಳನ್ನು ನಡೆಸುತ್ತಾ ಬಂದಿರುವ ವಾಡಿಕೆಯಿದೆ. ಎಂದು ಜಿಲ್ಲಾ ನಿರ್ದೇಶಕರಾದ ನಾಗರತ್ನಾ ಹೆಗಡೆ ಹೇಳಿದರು.



ಅವರು ಕಾನಟ್ಟಿ ಗ್ರಾಮದ ಶ್ರೀ ಶಿವಲಿಂಗೇಶ್ವರ ದೇವಸ್ಥಾನದಲ್ಲಿ ನಡೆದ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಡಲಗಿ ರೂರಲ್ ವಲಯದ ಸಂಯುಕ್ತಾಶ್ರಯದಲ್ಲಿ ನಡೆದ ಸಾಮೂಹಿಕ ಸತ್ಯನಾರಾಯಣ ಪೂಜಾ ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿ ಪೂಜಾ ದಾರ್ಮಿಕ ಕಾರ್ಯಗಳನ್ನು ಭಕ್ತಿಯಿಂದ ಪೂಜಿಸಿ ದ್ಯಾನಿಸಿದರೆಸಕಲಸೌಭಾಗ್ಯದೊರೆಯುತ್ತವೆ. ಆರ್ಥಿಕ ಅಭಿವೃದ್ಧಿ ಹೊಂದುವ ಸಲುವಾಗಿ ಧರ್ಮಸ್ಥಳದ ಸಂಸ್ಥೆ ಬ್ಯಾಂಕಿನ ಮೂಲಕ ಹಣದ ಸಹಾಯ ಮಾಡುತ್ತಿದೆ.ಆರ್ಥಿಕ ಗುಣಮಟ್ಟ ಬಡತನ ನಿರ್ಮೂಲನೆ ಮಾಡುವುದು ಉದ್ದೇಶವಾಗಿದೆ. ನಿರ್ಗತಿ–ಕರಿಗೆ, ವಯೋವೃದ್ಧರಿಗೆ, ಅಂಗವಿಕಲರಿಗೆ, ಮಾಸಿಕ ವೇತನ ,ಬಡಮಕ್ಕಳಿಗೇ ಉನ್ನತ ಮಟ್ಟದ ಶಿಕ್ಷಣ ಕಲಿಯಲು ಸುಜ್ಞಾನ ನಿಧಿ, ವಾತ್ಸಲ್ಯ ಕಾರ್ಯಕ್ರಮ ಕೆರೆಗಳ ಪುನಶ್ಚೇತನ ಕಾಮಗಾರಿ, ಹೈನುಗಾರಿಕೆ ಹೀಗೆ ಹಲವಾರು ಯೋಜಗಳು ಇವೆ ಸಾರ್ವಜನಿಕರು ಸದುಪಯೋಗ ಪಡೆದುಕೊಳ್ಳಬೇಕು.ಸಂಸ ್ಥೆಯಲ್ಲಿ ಜಾತಿ ಭೇದವಿಲ್ಲ ಕಾರ್ಯಕರ್ತರು ಸ್ವಾರ್ಥ ಬಾವನೆ ಬಿಟ್ಟು ಪ್ರಾಮಾಣಿಕವಾಗಿ ಕೆಲಸ ಕಾರ್ಯ ಮಾಡಿರಿ ಸದಸ್ಯರೂ ಕೂಡಾ ಸರಿಯಾದ ಸಮಯಕ್ಕೆ ಮರು ಪಾವತಿ ಮಾಡಬೇಕು .ರಾಜ್ಯದಲ್ಲಿ 54 ಲಕ್ಷ ಜನ ಸಂಸ್ಥೆಯಲ್ಲಿ ಸದಸ್ಯರಿದ್ದಾರೆ.

ಸಾಲ ತಗೊಂಡವರು ಸರಿಯಾದ ಸಮಯಕ್ಕೆ ಮರು ಪಾವತಿ ಮಾಡಬೇಕು ತಗೊಂಡು ಊರು ಬಿಟ್ಟು ಬೇರೆ ಕಡೆ ಹೋಗಬಾರದು.ಸದಸ್ಯರೂ ವಾರದ ಸಭೆ ನಡೆಸಿ ಸದಸ್ಯರು ನಿಮ್ಮ ಆಧಾರ ಕಾರ್ಡ್ ಮೇಲೆ ಬೇರೆಯವರಿಗೆ ಹಣ ಕೊಡಬೇಡಿ ಹಣ ತಗೊಂಡು ಸರಿಯಾಗಿ ಸದ್ಬಳಕೆ ಮಾಡಿಕೊಂಡು ಆರ್ಥಿಕ ಗುಣಮಟ್ಟ ಹೆಚ್ಚಿಸಿಕೊಳ್ಳಿ ಸಾರ್ವಜನಿಕರು ಸದಸ್ಯರಿಗೆ ಸಹಕಾರ ನೀಡಬೇಕು ಎಲ್ಲರೂ ಒಗ್ಗಟ್ಟಾಗಿ ಸಂಸ್ಥೆಯನ್ನು ಉಳಿಸಿ ಉನ್ನತ ಮಟ್ಟಕ್ಕೆ ಬೆಳೆಸುವ ಕಾರ್ಯ ಮಾಡಿದರೆ ಒಳ್ಳೆಯದೂ ಎಂದು ಹೇಳಿದರು. ಮಹಾಲಿಂಗಯ್ಯ ಪೂಜೇರಿ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿ ಸಾಮೂಹಿಕ ಸತ್ಯನಾರಾಯಣ ಪೂಜೆ ನಡೆದಿದ್ದು ಗ್ರಾಮಕ್ಕೆಒಳ್ಳೆಯದೂನಾವೆಲ್ಲಾರು ಈ ಸಭೆಯಲ್ಲಿ ಕೂಡಿದ್ದು ಪುಣ್ಯವಂತರು ಎಂದು ಹೇಳಿದರು.

ಈ ಸಮಯದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಮಹಾದೇವಿ ತುಪ್ಪದ.

ಉಪಾದ್ಯಕ್ಷ ಚೇತನ ರಡೇರಟ್ಟಿ.ತಾಲೂಕಾ ಯೋಜನಾಧಿಕಾರಿ ರಾಜು ನಾಯ್ಕ. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ವಿಜೇತ, ಸಮಾಜ ಸೇವಕ ಮುರಿಗೆಪ್ಪ ಮಾಲಗಾರ. ಶಿವನಪ್ಪ ತುಪ್ಪದ ಸೇರಿದಂತೆ ಒಕ್ಕೂಟದ ಪದಾಧಿಕಾರಿಗಳು ಸರ್ವ ಸದಸ್ಯರಿದ್ದು ಕಾರ್ಯಕ್ರಮವನ್ನು ಲಕ್ಷ್ಮೀ ಮದರಖಂಡಿ ಸ್ವಾಗತಿಸಿ. ಶಂಕರ ಡೋಣಿ ನಿರೂಪಿಸಿ ,ವಂದಿಸಿದರು.

## ಮಾಲೆಧಾರಣೆ ಶಿವುಕುಮಾರ್‌ರವರಿಗೆ ಸನ್ಮಾನ



**ಲಿಂಗಸಗೂರು** : ತಾಲೂಕಿನ ಹೊನ್ನಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯಸ್ಥಳಿಯ ರಹವಾಸಿಯಾದ ಶ್ರೀಶಿವಕುಮಾರ ಅಂಗಡಿ ಅವರು ಸತತವಾಗಿ–ಅಯ್ಯಪ್ಪಮಾಲೆ ದರಿಸುವ ಮೂಲಕ18ನೇ ವರ್ಷದ ಲ್ಲಿ ಪಾದಾರ್ಪಣೆಯ ಅಂಗವಾಗಿ ಲಿಂಗಸೂಗೂರುನಲ್ಲಿರುವ ಶ್ರೀ ಅಯ್ಯಾಪ್ಪ ಸ್ವಾಮಿ ಭಕ್ತರು ಗಳು ಮಹಾಲಕ್ಷ್ಮಿ ಟ್ರಾನ್ಸ್ಪೋರ್ಟ್ ಕಾರ್ಯಾಲಯ ದಲ್ಲಿ ಸಭೆ ಸೇರಿಅವರನ್ನು ಸನ್ಮಾನ್ಯ ಗೋಳಿಸುವ ಮೂಲಕ ಪರಸ್ಪರ ಭಕ್ತಿ ಪೂರ್ವಕವಾಗಿ ಸಂತೋಷ ಹಂಚಿಕೊಂಡರು.

ಈ ಸಂಧರ್ಭದಲ್ಲಿ ಲಿಂಗಸಗೂರು ತಾಲೂಕಿನ ಮಾಲೆ ಧಾರಣ ಸ್ವಾಮಿ ಗಳು. ಕಾರ್ಯಾಲಯ ದ ಮಾಲಕರು. ಸಿಬ್ಬಂದಿವರ್ಗ ಹಾಗೂ ಸ್ವಾಮಿ ಗಳು ಭಕ್ತ ವೃಂದದವರು ಭಾಗವಹಿಸಿದ್ದರು.

## ಮರೆಯದ ಮರೆಯಾದ ಮಾಜಿ ಪ್ರಧಾನಿ ಜಗತ್ತಿನ ಸರ್ವಶ್ರೇಷ್ಠ ಆರ್ಥಿಕ ತಜ್ಞ ಡಾ. ಮನಮೋಹನ್ ಸಿಂಗ್: ವಿರುಪಾಕ್ಷಿ. ಹೂಗಾರ

**ವರದಿ. ಚಂದ್ರೇಗೌಡ.**

**ಲಿಂಗಸಗೂರು** : ತಾಲೂಕಿನ ಕಲ್ಯಾಣ ಕರ್ನಾಟಕ ರಾಜ್ಯ ರ?ತಸಂಘಹಾಗೂ ಅನ್ನದಾತ ಬ್ರೀಗೆಡ್. ರಾಯಚೂರು ಜಿಲ್ಲಾ ಘಟಕ ಹಾಗೂ ಲಿಂಗಸಗೂರು ತಾಲೂಕು ಘಟಕ ಸಹಯೋಗದಲ್ಲಿ ಲಿಂಗಸಗೂರು ನಲ್ಲಿ ತಾಲೂಕು ಅಧ್ಯಕ್ಷರ ಕಾರ್ಯಾಲಯದಲ್ಲಿ ಶ್ರದ್ಧಾಂಜಲಿ ಕಾರ್ಯಕ್ರಮ ಹಮ್ಮಿಕೊಂಡು ಮರೆಯಾದ ಮಾಜಿ ಪ್ರಧಾನಿ ಜಗತ್ತಿನ ಸರ್ವಶ್ರೇಷ್ಠಆರ್ಥಿಕ ತಜ್ಞಡಾ.ಮನಮೋಹನ್ ಸಿಂಗ್.ರವರ ಶ್ರದ್ಧಾಂಜಲಿ ಕಾರ್ಯಕ್ರಮ ಆಚರಿಸಲಾಯಿತು.

ಮನಮೋಹನಸಿಂಗ್ ಭಾವಚಿತ್ರ ಕ್ಕೆ ಹೂಮಾಲೆಹಾಕಿ ಪೂಜೆಗ?ದುಅವರನ್ನು ಸ್ಮರಿಸಿ ಎರಡು ನಿಮಿಷ ಮೌನಾಚರಣೆಮೂಲಕ ಶ್ರಧ್ಧಾಂಜಲಿ ಸಲ್ಲಿಸಲಾಯಿತು. ಮರೆಯದ ಮರೆಯಾದ ಮಾಜಿ ಪ್ರಧಾನಿ ಡಾ. ಮನಮೋಹನಸಿಂಗ್ ರವರ ಕುರಿತು ವಿರುಪಾಕ್ಷಿ. ಎನ್. ಹೂಗಾರ. ರವರು. ಮಾತನಾಡಿ

ಡಿಸೆಂಬರ್ 26 ಮನಮೋಹನ್ ಸಿಂಗ್ ಅವರ ನಿಧನದ ಸುದ್ದಿ ಅಘಾತವನ್ನುಂಟುಮಾಡಿದೆ.

ಜಗತ್ತಿನ ಕೋಟ್ಯಂತರ ಜನರಿಗೆ ಸ್ಫೂರ್ತಿಯಾಗಿದ್ದ ಭಾರತದ ಮಾಜಿ ಪ್ರಧಾನಿಗಳು ಹಾಗೂ ಜಗತ್ತಿನ ಸರ್ವಶ್ರೇಷ್ಠ ಆರ್ಥಿಕ ತಜ್ಞರಲ್ಲಿ ಒಬ್ಬರಾಗಿದ್ದ ಸರ್ವಶ್ರೇಷ್ಠ ಚಿಂತಕರಾದ ಡಾ. ಮನಮೋಹನ್ ಸಿಂಗ್ ಅವರು ನಿಧನರಾಗಿದ್ದು ಜಗತ್ತಿಗೆ ತುಂಬಲಾರದ ನಷ್ಟವಾಗಿದೆ.

ಡಾ. ಮನಮೋಹನ್ ಸಿಂಗ್ ಅವರು ಅನೇಕ ಸಾಧಕರಿಗೆ ಮಾರ್ಗದರ್ಶನವಾಗಿದ್ದಾರೆ ಹಾಗೂ ದಾರಿ ದೀಪವಾಗಿದ್ದಾರೆ ಕಡಿಮೆ ಮಾತಿನಲ್ಲಿ ಹೆಚ್ಚು ಕೆಲಸ ಮಾಡಬಹುದು ಎನ್ನುವುದನ್ನು ತೋರಿಸಿಕೊಟ್ಟ ಧೀಮಂತ ವ್ಯಕ್ತಿತ್ವದ



ಮನಮೋಹನ್‌ಸಿಂಗ್‌ಸಿಂಗ್‌ಅವರುಜಗತ್ತಿಗೆಆರ್ಥಿಕತೆಯ ಅಭಿವೃದ್ಧಿಗೆ ಹೆಚ್ಚು ಸಹಕಾರಿ ಆದವರು. ಅನೇಕ ದೇಶಗಳು ಆರ್ಥಿಕವಾಗಿ ಹಿಂಜರಿತ ಕಂಡಾಗ ಮನಮೋಹನ್ ಸಿಂಗ್ ಅವರ ಮಾರ್ಗದರ್ಶನ ಅತ್ಯಂತ ಪ್ರಮುಖವಾಗಿತ್ತು ಹಾಗೆ ಭಾರತಕ್ಕೆ ಇವರ ಕೊಡುಗೆ ಅಪಾರವಾಗಿದೆ. ಪಕ್ಷಾತೀತವಾಗಿ ಜಾತ್ಯತೀತವಾಗಿ ಒಪ್ಪುವಂತಹ ಅಪರೂಪದ ಮನಸ್ಸಿನ ಮನಮೋಹನ್ ಸಿಂಗ್ ಅವರು.


ಅತಿ ಕಡಿಮೆ ಮಾತುಗಳಲ್ಲಿ ಕಡಿಮೆ ಮಾತುಗಳಾಡಿದ ಅತಿ ಹೆಚ್ಚು ಕೆಲಸಗಳಲ್ಲಿ ಅತಿ ಹೆಚ್ಚು ಕೆಲಸ ಮಾಡಿದ ಒಬ್ಬ ದಾರ್ಶನಿಕ ಚಿಂತಕರೆಂದರೆ ತಪ್ಪಿಲ್ಲ ಎಂದು ಹೇಳಿದರು. ನಂತರ ಕಲ್ಯಾಣ ಕರ್ನಾಟಕ ರಾಜ್ಯರ?ತಸಂಘಹಾಗೂ ಅನ್ನದಾತ ಬ್ರೀಗೆಡ್ ರಾಯಚೂರು. ರಾಜ್ಯಾಧ್ಯಕ್ಷರಾದ ಡಾ. ಶಾಮೀದ್‌ಅಲಿ. ಕರಡಕಲ್ ರವರುಮಾತನಾಡುತ್ತಾ ವಿಶ್ವ ರ?ತ ದಿನಾಚರಣೆ ಸರಳವಾಗಿ ಆಚರಿಸುವದರ ಸರಳತೆ ಯಲ್ಲಿ ರದ್ದುಗೊಂಡು ರೈತಸಂಘದ ದಿನಾಚರಣೆ ಸಂಘದ ನೇತೃತ್ವದಲ್ಲಿ ಮರೆಯದ ಮಾಜಿ ಪ್ರಧಾನಿ ನಿಧನದ ಅಂಗವಾಗಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮನಮೋಹನ್ ಸಿಂಗ್ ಅವರು ನೀಡಿದ ಅಭಿವೃದ್ಧಿಯ ಹಾರ್ದಿಕ ಸಾಮಾಜಿಕ ಶೈಕ್ಷಣಿಕ ಮೊದಲಾದ ಕ್ಷೇತ್ರಗಳ ಒಂದಿಷ್ಟು ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಿದರೆ ದೇಶ ಮಾತ್ರವಲ್ಲ ಜಗತ್ತೇ ಆರ್ಥಿಕ ಸಂಕಷ್ಟದಿಂದ ಹೊರಬರಲು ಸಾಧ್ಯವಾಗುತ್ತದೆ ಇಂದು ಪ್ರತಿಯೊಬ್ಬರು ಆರ್ಥಿಕವಾಗಿ ಸದನರಾಗಿದ್ದಾರೆ ಎಂದರೆ, ಮನಮೋಹನ್ ಸಿಂಗ್ ಅವರ ಇಂದಿನ ಪರಿಶ್ರಮ ಅವರು ಹಾಕಿಕೊಟ್ಟ ಭದ್ರ ಬುನಾದಿಯೇ ಪ್ರಮುಖವಾಗಿದೆ ಆಹಾರ ಭದ್ರತಾ ಕಾಯ್ದೆ ನೀಡಿದ ಮಹಾನ್ ಚೇತನ ಇವರು ಕರೋನದಂತಹ ಕಾಲಘಟ್ಟದಲ್ಲಿಯೂ ಇದು ಹೆಚ್ಚು ಪೂರಕವಾಗಿ ಜನರ ಬದುಕಿಗೆ ಆಶಾದಾಯಕವಾಗಿತ್ತು ಇಂತಹ ಅನೇಕ ಯೋಜನೆಗಳನ್ನು ಜಾರಿಗೆ ತಂದು ಜಗತ್ತನ್ನು ತನ್ನತ್ತ ಗಮನಸೆಳೆದ ಓರ್ವ ಮಹಾನ್ ಚಿಂತಕ ನಮ್ಮನ್ನು ಆಗಲಿರಬಹುದು ಆದರೆ ಅವರು ಹಾಕಿದ ಮಾರ್ಗದಲ್ಲಿ ನಾವು ಆಗಬೇಕಾಗಿದೆ ಅವರ ಪ್ರತಿಯೊಂದು ಹೆಜ್ಜೆಗಳು ದೇಶದ ಹಾಗೂ ಜಗತ್ತಿನ ಅಭಿವೃದ್ಧಿಗೆ ಪೂರಕವಾಗಿದ್ದವು ಎನ್ನುವುದನ್ನು ನಾವು ಮರೆಯುವಂತಿಲ್ಲ.ಎಂದು ಸ್ಮರಿಸಿ ಮಾತನಾಡಿ ದರು.

ಈ ಸಂಧರ್ಭದಲ್ಲಿ ವಿರುಪಾಕ್ಷಿ. ಎನ್. ಹೂಗಾರ್, ಡಾ.ಶಾಮೀದ್‌ಅಲಿಕರಡಕಲ್. .ರಾಜ್ಯಾಧ್ಯಕ್ಷರು ಕಲ್ಯಾಣ ಕರ್ನಾಟಕ ರಾಜ್ಯರ?ತಸಂಘ ಹಾಗೂ ಅನ್ನದಾತ ಬ್ರೀಗೆಡ್ ಲಿಂಗಸಗೂರು, ಕಾಳಪ್ಪಬಡೀಗೇರ್. ಶಿಲ್ಪಿ ತಾಲೂಕ ಅಧ್ಯಕ್ಷರು ಹಾಗೂ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು ಬಸ್ಸಯ್ಯಾಸ್ವಾಮಿ. ಹಿರೇಮಠ. ಪ್ರಕಾಶ ಹನುಮಂತಪ್ಪ.ಹಾಗೂ ಇನ್ನಿತರಿದ್ದರು.

# ಸಂಪಾದಕರ ಸಂಘದ ಕೊಪ್ಪಳ ಘಟಕಕ್ಕೆ ನೂತನ ಸಾರಥಿಗಳು

## ಅಧ್ಯಕ್ಷರಾಗಿ ಶ್ರೀನಿವಾಸ, ಕಾರ್ಯದರ್ಶಿಯಾಗಿ ಖಲೀಲ್ ಉಡೇವು ಆಯ್ಕೆ



**ಕೊಪ್ಪಳ :** ನಗರದ ಪ್ರವಾಸಿ ಮಂದಿರದಲ್ಲಿ ಸಂಘಟನೆಯ ರಾಜ್ಯಾಧ್ಯಕ್ಷ ಎ.ಸಿ. ತಿಪ್ಪೇಸ್ವಾಮಿ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಂಘದ ಕೊಪ್ಪಳ ಜಿಲ್ಲಾ ಘಟಕದ ಪುನಾರಚನೆ ಭಾನುವಾರ ನಡೆಯಿತು.

ಕೊಪ್ಪಳಜಿಲ್ಲಾಘಟಕಕ್ಕೆಅಧ್ಯಕ್ಷರಾಗಿಶ್ರೀನಿವಾಸ ಎಂ.ಜೆಮತ್ತುಪ್ರಧಾನಕಾರ್ಯದರ್ಶಿಯಾಗಿ ಮೊಹಮ್ಮದ್ ಖಲೀಲ್ ಉಡೇವು ಅವರು ಅವಿರೋಧವಾಗಿ ಆಯ್ಕೆಯಾದರು.

ನಂತರ ಈರಣ್ಣ ಕಳ್ಳಿಮನಿ ಹಾಗೂ ಎಸ್.ಎಂ, ಪಟೇಲ್ ಉಪಾಧ್ಯಕ್ಷರಾಗಿ, ವೈ.ಬಿ. ಜೂಡಿ ಜಂಟಿ ಕಾರ್ಯದರ್ಶಿ, ವೈ ನಾಗರಾಜ್ ಖಜಾಂಚಿಯಾಗಿ ಎಂ.ಡಿ. ಅಖೀಲ್ ಉಡೇವು ಸಂಘಟನಾ ಕಾರ್ಯದರ್ಶಿ, ಅಕ್ಷಯ್ ಇರಕಲ್ ಸಹಕಾರ್ಯದರ್ಶಿಯಾಗಿ, ಕಾರ್ಯಕಾರಿ ಮಂಡಳಿಯ ಸದಸ್ಯರಾಗಿ ದೇವುನಾಗನೂರು, ಎಚ್.ವಿ. ರಾಜಾಭಕ್ಷಿ ಆಯ್ಕೆಯಾದರು.

ಮುಂದಿನ ಜಿಲ್ಲಾ ಘಟಕದ ಸಭೆಯಲ್ಲಿ ಅನುಮೋದಿಸಿ ಹಿರಿಯ ಸದಸ್ಯ ಎನ್.ಎಂ. ದೊಡ್ಮನಿ ಅವರನ್ನು ರಾಜ್ಯ ಕಾರ್ಯಕಾರಣಿಗೆ ಕಳಿಸಿಕೊಡುವಂತೆ ರಾಜ್ಯಾಧ್ಯಕ್ಷ ಸಲಹೆ ನೀಡಿದರು.

ನಂತರ ಮಾತನಾಡಿದ ರಾಜ್ಯಾಧ್ಯಕ್ಷ ಎ.ಸಿ. ತಿಪ್ಪೇಸ್ವಾಮಿ, ಸ್ಥಳೀಯ ಅಂದರೆ ಜಿಲ್ಲಾಮಟ್ಟದ ದಿನಪತ್ರಿಕೆಗಳು ಸಾಕಷ್ಟು ಸಮಸ್ಯೆ ಎದುರಿಸುತ್ತಿವೆ, ಸರ್ಕಾರದಿಂದ ಸೂಕ್ತವಾಗಿರುವ ಸೌಲಭ್ಯಗಳು ಸಿಗುತ್ತಿಲ್ಲ, ಈ ಹಿಂದೆ ಹೋರಾಟ ಮಾಡುವ ಉದ್ದೇಶಕ್ಕೆ ಅಸ್ತಿತ್ವಕ್ಕೆ ಬಂದಿದ್ದ ಸಾಕಷ್ಟು ಸಂಪಾದಕರ ಸಂಘಗಳು ಸ್ವಾರ್ಥಕ್ಕೆ ನಾಶವಾಗಿವೆ ಎಂದರು.

ನಮ್ಮದು ವಿಭಿನ್ನ ಸಂಘಟನೆಯಾಗಿದ್ದು ಇಡೀ ರಾಜ್ಯದಾದ್ಯಂತ ಹೆಚ್ಚು ಮನ್ನಣೆ ಸಿಗುತ್ತಿದೆ. ಈಗಾಗಲೆ ರಾಜ್ಯದ 630 ಪತ್ರಿಕೆಗಳ ಪೈಕಿ ನಮ್ಮ ಸಂಘದಲ್ಲಿ 280ಕ್ಕೂ ಹೆಚ್ಚು ಪತ್ರಿಕೆಗಳು ಸದಸ್ಯತ್ವ ಪಡೆದುಕೊಂಡಿವೆ. ನಮ್ಮ ಜವಾಬ್ದಾರಿ ಹೆಚ್ಚಾಗಿದ್ದು, ಈ ಹಿನ್ನೆಲೆ ಸಂಘಟಿತರಾಗಿ ಹೋರಾಟ ಮಾಡಬೇಕಿದೆ ಎಂದರು.

ಪ್ರಧಾನ ಕಾರ್ಯದರ್ಶಿ ಟಿ.ಎಸ್. ಕೃಷ್ಣಮೂರ್ತಿ ಮಾತನಾಡಿ, ಈಗಾಗಲೆ ಜಿಲ್ಲಾ ಘಟಕದಿಂದ ಎಚ್.ಎಸ್. ಹರೀಶ್ ಮತ್ತು ವಿಶ್ವನಾಥ್ ಬೆಳಗಲ್‌ಮಠ ಅವರನ್ನು ಕೇಂದ್ರ ಸಮಿತಿಗೆ ತೆಗೆದುಕೊಳ್ಳಲಾಗಿದೆ.

ನಮ್ಮ ಸಂಘಟನೆ ಗಟ್ಟಿಯಾಗಿದ್ದರೆ ಸರ್ಕಾರದಿಂದ ಹೆಚ್ಚಿನ ಸೌಲಭ್ಯಗಳನ್ನು ಪಡೆದುಕೊಂಡು

ನಮ್ಮ ಪತ್ರಿಕೆಗಳನ್ನು ಅಭಿವೃದ್ಧಿ ಪಡಿಸಲು ಸಾಧ್ಯ ಎಂದರು.

ಇದೀಗ ಕೊಪ್ಪಳದ ನೂತನ ಜಿಲ್ಲಾ ಘಟಕ ಹೆಚ್ಚು ಕ್ರಿಯಾಶೀಲವಾಗಿ ಕೆಲಸಮಾಡಬೇಕು. ಸದಸ್ಯತ್ವ ಪಡೆಯದೇ ಇರುವವರನ್ನು ಕೈಬಿಡಬೇಕು, ಸದಸ್ಯತ್ವ ಸ್ವೀಕರಿಸಿದ ಬಳಿಕ ಅವರನ್ನು ಜಿಲ್ಲಾ ಘಟಕಕ್ಕೆ ಮರು ಸೇರ್ಪಡೆ ಮಾಡಿಕೊಳ್ಳಿ ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ರಾಜ್ಯ ಸಮಿತಿಯ ಉಪಾಧ್ಯಕ್ಷ ಎಚ್.ಎಸ್. ಹರೀಶ್, ರಾಜ್ಯ ಸಮಿತಿಯ ಪ್ರತಿನಿಧಿ ವಿಶ್ವನಾಥ್ ಬೆಳಗಲ್‌ಮಠ, ರಾಜ್ಯ ಘಟಕದ ಜಂಟಿ ಕಾರ್ಯದರ್ಶಿಗಳಾದ ಬಿ. ದಿನೇಶ್ ಗೌಡಗೇರೆ, ಸಿ. ರಂಗನಾಥ್, ಮಂಡ್ಯ ಜಿಲ್ಲಾ ಘಟಕದ ಅಧ್ಯಕ್ಷ ಎಲ್ ಶಿವಶಂಕರ್ ಇದ್ದರು.

# ಡಾ.ಎಸ್. ಎಂ.ಗಾಂವಕರಗೆ ಬಿಳ್ಕೊಡುವ ಸಮಾರಂಭ

## ಉತ್ತಮ ಸೇವೆ ಸಲ್ಲಿಸಿದವರಿಗೆ ಗೌರವಿಸುವುದು ಅದ್ಯ ಕರ್ತವ್ಯ: ಗುರು ಬಸವ ಸೂಳಿಭಾವಿ




**ಬಾಗಲಕೋಟೆ :** ವೃತ್ತಿಯಲ್ಲಿ ಉತ್ತಮ ಸೇವೆ ಸಲ್ಲಿಸಿದವರನ್ನು ಗೌರವಿಸಿ ಸನ್ಮಾನಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ಕಾಲೇಜುಗಳ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಗುಲುಬಸವ ಸೂಳಿಬಾವಿ ಹೇಳಿದರು.

ಅವರು ಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ.ಎಸ್.ಎಂ.ಗಾಂವಕರವರು ಸೇವೆಯಿಂದ ನಿವೃತ್ತರಾಗಲಿರುವ ಹಿನ್ನೆಲೆಯಲ್ಲಿ ಮಹಾವಿದ್ಯಾಲಯದಿಂದ ಸನ್ಮಾನ ಹಾಗೂ ಬೀಳ್ಕೊಡುವ ಸಮಾರಂಭದಲ್ಲಿ ಕಾರ್ಯಕ್ರಮದ ಅಧ್ಯಕ್ಷತೆಯನ್ನುವಹಿಸಿ ಮಾತನಾಡಿದರು.

ಗಾಂವಕರ ಅವರು ಉತ್ತಮ ಸೇವೆ ಸಲ್ಲಿಸಿದ ಪರಿಣಾಮ ಇಂದು ಮಹಾವಿದ್ಯಾಲಯಕ್ಕೆ ಹೆಸರು ಮತ್ತು ಕೀರ್ತೀ ತಂದಿದ್ದಾರೆ, ಇಂಥ ಪ್ರಾಮಾಣಿಕರ ಸೇವೆ ಸದಾಕಾಲ ಮಹಾವಿದ್ಯಾಲಯಕ್ಕೆ ಸಂಘಕ್ಕೆ ಸಿಗಲಿ ಎಂದರು. ಸನ್ಮಾನ ಸ್ವೀಕರಿಸಿ ಮಾತನಾಡಿದ ಡಾ.ಎಸ್. ಎಂ.ಗಾಂವಕರ ಮಾತನಾಡಿ ಬಿ.ವಿ.ವಿ.ಸಂಘದ ಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಚರಂತಿಮಠ ಅವರ ಮಾರ್ಗದರ್ಶನದಲ್ಲಿ ಇಂಥ ಐತಿಹಾಸಿಕ ಸಂಸ್ಥೆಯಲ್ಲಿ ಸೇವೆ ಸಲ್ಲಿಸಲು ಅವಕಾಶ ಸಿಕ್ಕಿರುವುದು ನನ್ನ ಪುಣ್ಯ, ಸೇವೆಯ ಸಾರ್ಥಕತೆಯ ಆತ್ಮ ವಿಶ್ವಾಸ ನನ್ನಲ್ಲಿ ತುಂಬಿದೆ, ನಾವು ಸೇವೆ ಸಲ್ಲಿಸುತ್ತಿರುವ ಸಂಸ್ಥೆಯ ಬಗ್ಗೆ ನಮಗೆ ಹೆಮ್ಮೆ ಇರಬೇಕು, ಸಹ ಶೀಕ್ಷಕ ವೃಂದ, ಕಾಲೇಜು ಆಡಳಿತ ಮಂಡಳಿಗಳು, ಸಂಘದ ದಿಂದ ದೊರೆತ ಪ್ರೋತ್ಸಾಹವೇ ನನಗೆ ಸ್ಫೂರ್ತಿಯಾಗಿದೆ ಎಂದರು.

ಐಕ್ಯೂಎಸಿ ಸಂಯೋಜಕರಾದ ಡಾ.ಡಿ.ಎಸ್.ಲಮಾಣಿ, ಪಿಯು ವಿಭಾಗದ ಪ್ರಾಚಾರ್ಯ ಡಾ.ಎನ್. ಎಚ್.ಬೇವಿನಹಳ್ಳಿ,ವಿದ್ಯಾಗಿರಿಯ ಬಸವೇಶ್ವರ ಕಲಾ.ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯ ಪ್ರಾಚಾರ್ಯ ಟಿ.ಬಿ.ಕೋರಿಶೇಟ್ಟಿ, ವಿ.ಎನ್.ವನಕುದರಿ ಸೇರಿದಂತೆ ಅನೇಕರು ವೇದಿಕೆಯ ಮೇಲೆ ಇದ್ದರು. ಇದೇ ಸಂದರ್ಭದಲ್ಲಿ ಡಾ. ಎಸ್. ಎಂ.ಗಾಂವಕರ ಅವರ ದಂಪತಿಗಳನ್ನು ವಿಜ್ಞಾನ ಮಹಾವಿದ್ಯಾಲಯ ಸೇರಿದಂತೆ ವಿವಿಧ ಮಹಾವಿದ್ಯಾಲಯಗಳಿಂದ ಸನ್ಮಾನಿಸಿ ಗೌರವಿಸಿ ಅವರನ್ನು ಬೀಳ್ಕೊಡಲಾಯಿತು.

# ಭಕ್ತಿ, ಜ್ಞಾನ, ವೈರಾಗ್ಯಗಳಿಂದ ಮನುಜ ಮಹಾದೇವನಾಗುತ್ತಾನೆ



**ರಬಕವಿ :** ಭಕ್ತಿ, ಜ್ಞಾನ, ವೈರಾಗ್ಯಗಳಿಂದ ಮನುಜ ಮಹಾದೇವನಾಗುತ್ತಾನೆ. ಮಹಾತ್ಮರು ಸತ್ಯವನ್ನು ಅರಿತು ಆಚರಿಸಿಕೊಂಡು ನಡೆದವರು. ಪರಮ ಸತ್ಯದದರ್ಶನವೇನಮ್ಮಮೂಲಗುರಿ.ಅದು ಸದ್ಗುರುವಿನ ಕೃಪೆಯಿಂದ ಪಡೆದುಕೊಳ್ಳಲು ಸಾಧ್ಯ. ಇದರಿಂದ ಅಜ್ಞಾನಿಯೂ ಕೂಡಾ ಜ್ಞಾನವಂತನಾಗುತ್ತಾನೆ ಎಂದು ಗುಳೇದಗುಡ್ಡದಗುರುಸಿದ್ಧೇಶ್ವರ ಬೃಹನ್ಮಠದ ಗುರುಸಿದ್ಧೇಶ್ವರ ಸ್ವಾಮೀಜಿ ಹೇಳಿದರು.

ಅವರು ಸೋಮವಾರ ರಬಕವಿಯ ಗುರುದೇವ ಬ್ರಹ್ಮಾನಂದ ಆಶ್ರಮದಲ್ಲಿ ಗುರುದೇವರ ಕಾರ್ತಿಕೋತ್ಸವ, ಅನುಭಾವದಂಗಳದ–145 ನೇ ಕಾರ್ಯಕ್ರಮ ಮತ್ತು ಮಹಾತ್ಮರ ಚರಿತಾಮೃತಪ್ರವಚನದಪ್ರಾರಂಭೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿದರು.

ದಾವಣಗೇರಿಯ ಶಿವಯೋಗಾಶ್ರಮ ವಿರಕ್ತಮಠದ ಬಸವಪ್ರಭು ಮಹಾಸ್ವಾಮೀಜಿ ಮಾತನಾಡಿ, ಪ್ರತಿಯೊಬ್ಬರ ಜೀವನದಲ್ಲಿ ಸಂತೋಷ ಮತ್ತು ದುಃಖಗಳು ಇರುತ್ತವೆ. ಅತೃಪ್ತಿನಮ್ಮಜೀವನದಲ್ಲಿದುಃಖವನ್ನುಂಟು ಮಾಡುತ್ತದೆ. ನಮ್ಮ ಬದುಕು ನಿತ್ಯ ತೃಪ್ತಿಯಾಗಿರಬೇಕಾದರೆ ಜೀವನದಲ್ಲಿ ನಾವು ಸುಖಿಗಳಾಗಿರಬೇಕು. ನಮ್ಮ ಅಂತರಂಗ ಪರಿಶುದ್ಧವಾಗಿದ್ದರೆ ನಮ್ಮ ಮನಸ್ಸು ಅರಳುತ್ತದೆ. ದಿನ ನಿತ್ಯ ನಾಲ್ಕು ಒಳ್ಳೆಯ ಮಾತುಗಳನ್ನು ಕೇಳಬೇಕು. ನಮ್ಮಲ್ಲಿಯ ಅಜ್ಞಾನದ ಕತ್ತಲೆಯನ್ನು ಕಳೆಯಲು ಗುರುವಿನ ಉಪದೇಶ ಮುಖ್ಯವಾಗಿದೆ ಎಂದು ನುಡಿದರು.

ಘೋಡಗೇರಿಯ ಮಲ್ಲಯ್ಯ ಸ್ವಾಮೀಜಿ ಮಾತನಾಡಿ, ನಮ್ಮ ಮೂಲ ಸ್ವರೂಪವನ್ನು ತಿಳಿಸುವುದು ಅಧ್ಯಾತ್ಮ. ಗುರುಗಳು ಮತ್ತು ಮಹಾತ್ಮರು ಮಾನವ ಕಲ್ಯಾಣಕ್ಕಾಗಿ ಉದ್ಧರಿಸಿದವರು. ಮಠಗಳ ಅಭಿವೃದ್ಧಿಗಾಗಿ ನಾವು ಸದ್ಭಾವದಿಂದ ಸೇವೆಯನ್ನು ಸಲ್ಲಿಸಬೇಕು. ಬ್ರಹ್ಮಾನಂದರು, ಮಲ್ಲಿಕಾರ್ಜುನ ಸ್ವಾಮೀಜಿ ಮತ್ತು ಸಿದ್ಧೇಶ್ವರ ಸ್ವಾಮೀಜಿಯವರು ಕರ್ನಾಟಕದಲ್ಲಿ ಆಧ್ಯಾತ್ಮಿಕಕ್ರಾಂತಿಯನ್ನುಂಟುಮಾಡಿದವರು ಎಂದರು.

ಕಾರ್ಯಕ್ರಮದಲ್ಲಿ ರಬಕವಿಯ ಬ್ರಹ್ಮಾನಂದ ಆಶ್ರಮದ ಗುರುಸಿದ್ಧೇಶ್ವರ ಸ್ವಾಮೀಜಿ, ರಬಕವಿಯ ವಿರಕ್ತ ಮಠದ ಗುರುಮಹಾಂತ ಸ್ವಾಮೀಜಿ, ಮರೆಗುದ್ದಿಯ ನೀಲಮ್ಮತಾಯಿ ಮಾತನಾಡಿದರು. ರನ್ನಬೆಳಗಲಿ ಸಿದ್ಧಾರೂಢ ಮಠದ ಸಿದ್ಧರಾಮ ಶಿವಯೋಗಿ ಸ್ವಾಮೀಜಿ ಪ್ರವಚನ ನೀಡಿದರು. ಬಸವಲಿಂಗಯ್ಯ ಹಿಡಕಲ್ಲಮಠ ಮತ್ತು ಶಂಕ್ರಯ್ಯ ಹಿಡಕಲ್ಲಮಠ ಸಂಗೀತ ಸೇವೆಯನ್ನು ನಡೆಸಿ ಕೊಟ್ಟರು.

ಗಿರೀಶ ಮುತ್ತೂರ, ಶಿವಾನಂದ ದಾಶ್ಯಾಳ, ಮಹಾಲಿಂಗಪ್ಪ ಕೋಳಿಗುಡ್ಡ, ಸುರೇಶ ಚಿಂಡಕ, ನೀಲಕಂಠ ಮುತ್ತೂರ, ವೆಂಕಟೇಶ ನಿಂಗಸಾನಿ, ಬುದ್ದಪ್ಪ ಕುಂದಗೋಳ, ವಜ್ರಕಾಂತ ಕಮತಗಿ, ಸೋಮಶೇಖರ ಕೊಟ್ಟರಶೆಟ್ಟಿ, ಸಂಗಪ್ಪ ಕುಂದಗೋಳ, ಶಂಕರ ಅರಬಳ್ಳಿ, ಶಿವಾನಂದ ಬಾಗಲಕೋಟಮಠ, ದಯಾನಂದ ಬಾಗಲಕೋಟಮಠ, ಡಾ. ಜಿ. ಎಚ್. ಚಿತ್ತರಗಿ, ಶಿವಾನಂದ ಬಾಗಲಮನಿ, ಮುರಗೆಪ್ಪ ಮಿರ್ಜಿ, ಶ್ರೀದೇವಿ ಪರಮಶೆಟ್ಟಿ, ವಿಜಯಲಕ್ಷ್ಮಿ ಲುಕ್ಕ, ಮಲ್ಲು ಖವಾಸಿ, ಅರವಿಂದ ವ್ಯಾಸ, ಮ. ಕೃ. ಮೇಗಾಡಿ, ಈರಣ್ಣ ಗಣಮುಖಿ, ಮಹಾದೇವ ಕವಿಶೆಟ್ಟಿ, ಹೊನ್ನಪ್ಪ ಬಿರಡಿ, ವಿರುಪಾಕ್ಷಯ್ಯ ಮಠದ, ವಾಯ್. ಬಿ. ಕೊರಡೂರ, ನಂದಾ ಕೊಕಟನೂರ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

# ಗ್ರಾ.ಪಂ. ಅಧ್ಯಕ್ಷೆಯಾಗಿ ಬಂಗಾರೆವ್ವ ಅವಿರೋಧ ಆಯ್ಕೆ






**ಚಿಮ್ಮಡ :** ಇಲ್ಲಿನ ಗ್ರಾಮ ಪಂಚಾಯತಿ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಎಂಟನೇ ವಾರ್ಡಿನ ಸದಸ್ಯೆ ಬಂಗಾರೆವ್ವಾ ಪಾಂಡಪ್ಪಾ ಜಾಲಿಕಟ್ಟಿ ಅಧ್ಯಕ್ಷೆಯಾಗಿ ಅವಿರೋಧ ಆಯ್ಕೆಯಾದರು. ಈ ಮೊದಲು ಅಧ್ಯಕ್ಷೆಯಾಗಿದ್ದ ಮಾಲಾ ಅಶೋಕ ಮೋಟಗಿಯವರ ವಿರುದ್ಧ ಕಳೆದ ತಿಂಗಳು ನಡೆದ ಅವಿಶ್ವಾಸ ನಿರ್ಣಯದಲ್ಲಿ ಸೋಲಾದ ಪ್ರಯುಕ್ತ ಅವರು ತಮ್ಮ ಸ್ಥಾನಕ್ಕೆ ರಾಜಿನಾಮೆ ನೀಡಿದ್ದನ್ನು ಇಲ್ಲಿ ಸ್ಮರಿಸಬಹುದು. ತೆರವಾಗಿರುವ ಸ್ಥಾನಕ್ಕೆ ಡಿಸೆಂಬರ್ 31 ರಂದು ಚುನಾವಣೆ ಘೋಷಣೆಯಾಗಿತ್ತು. ಅದ್ಯಕ್ಷ ಸ್ಥಾನ ಸಾಮಾನ್ಯ ಮಹಿಳಾ ಅಭ್ಯರ್ಥಿಗೆ ಮೀಸಲಾಗಿದ್ದು, ಚುನಾವಣಾ ಪ್ರಕ್ರಿಯೆಯಲ್ಲಿ ಕೇವಲ ಒಂದೇ ನಾಮಪತ್ರ ಸಲ್ಲಿಕೆಯಾಗಿದ್ದರಿಂದ ನಾಮಪತ್ರ ಸಲ್ಲಿಸಿದ್ದ ಶ್ರೀಮತಿ ಬಂಗಾರೆವ್ವಾ ಪಾಂಡಪ್ಪಾ ಜಾಲಿಕಟ್ಟಿಯವರು ಅದ್ಯಕ್ಷೆಯಾಗಿ ಅರೋಧವಾಗಿ ಆಯ್ಕೆಯಾಗಿದ್ದಾರೆಂದು ಚುನಾವಣಾಧಿಕಾರಿಯಾಗಿ ಆಗಮಿಸಿದ್ದ ರಬಕವಿ–ಬನಹಟ್ಟಿ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಸಿದ್ದಪ್ಪಾ ಪಟ್ಟಿಹಾಳ ಘೋಷಿಸಿದರು.

ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷರಾದ ಶಂಕರ ಬಟಕುರ್ಕಿ, ಪ್ರಭು ಪಾಲಭಾವಿ, ಗುರಲಿಂಗಪ್ಪಾ ಪೂಜಾರಿ, ಪ್ರಕಾಶ ಪಾಟೀಲ, ಆನಂದ ಕವಟಿ, ತಾಲೂಕು ಪಂಚಾಯತ್ ಮಾಜಿ ಉಪಾದ್ಯಕ್ಷ ಪ್ರಭು ಮುಧೋಳ, ಬಸವರಾಜ ಕುಂಚನೂರ, ವಿಜಯಕುಮಾರ ಪೂಜಾರಿ, ಮನೋಜ ಹಟ್ಟಿ, ಪೈಗಂಬರ ಮೋಪಗಾರ, ನಾಗಪ್ಪಾ ಆಲಕನೂರ, ರಮೇಶ ಮೇತ್ರಿ,

ಕೇಶವ ವಂದಾಲ, ಮಹಾಂತೇಶ ಜಾಲಿಕಟ್ಟಿ, ಅವ್ವನ್ನಪ್ಪಾ ಮುಗಳಖೋಡ, ಅಭಿವೃದ್ಧಿ ಅಧಿಕಾರಿ ಶಿವಾನಂದ ಬಿರಾದಾರ, ಉಪಾಧ್ಯಕ್ಷೆ ಶ್ರೀಮತಿ ಪದ್ಮಾವತಿ ಪ್ರಭು ಬಜಂತ್ರಿ ಸೇರಿದಂತೆ ಗ್ರಾಮ ಪಂಚಾಯತ್ ಮಹಿಳಾ ಸದಸ್ಯೆಯರು, ಬಿಜೆಪಿ ಮುಖಂಡರು ಸೇರಿದಂತೆ ಹಲವಾರು ಜನ ಕಾರ್ಯಕರ್ತರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ವಿಜಯೋತ್ಸವ; ಫಲಿತಾಂಶ ಘೋಷಣೆ ಆಗುತ್ತಿದ್ದಂತೆಯೇ ಕಾರ್ಯಕರ್ತರಿಂದ ಗುಲಾಲು ಎರಚಿ ಪಟಾಕಿ ಸಿಡಿಸುವ ಮೂಲಕ ವಿಜಯೋತ್ಸವ ಆಚರಿಸಲಾಯಿತು. ಬನಹಟ್ಟಿ ಪಿಎಸ್‌ಐ ಶಾಂತಾ ಹಳ್ಳಿ ಸೂಕ್ತ ಬಂದೋಬಸ್ತ ಏರ್ಪಡಿಸಿದ್ದರು. ಬೀಟ್ ಸಿಬ್ಬಂದಿ ಆರ್. ಬಿ. ಪೂಜೇರಿ, ಎ. ಐ. ಹುನ್ನೂರ ಉಪಸ್ಥಿತರಿದ್ದರು.

# 'ಕೃತಕ ಅಂಗಾಂಗ' ಜೋಡಣೆ ಜಾಗೃತಿ ಅಭಿಯಾನ ಜಾಥಾ ಕಾರ್ಯಕ್ರಮ

## ಗವಿಮಠ ಜಾತ್ರಾ ಮಹೋತ್ಸವ: ವಿದ್ಯಾರ್ಥಿಗಳಿಗಾಗಿ ವಿವಿಧ ಸ್ಪರ್ಧೆ

**ಕೊಪ್ಪಳ :** ಕೊಪ್ಪಳದ ಶ್ರೀ ಗವಿಮಠ ಜಾತ್ರಾ ಮಹೋತ್ಸವ–2025ರ ಪ್ರಯುಕ್ತ ನಡೆಯಲಿರುವ ಕೃತಕ ಅಂಗಾಂಗ" ಉಚಿತ ಜೋಡಣೆ (ಕೃತಕ ಕೈ, ಕಾಲು, ವಿದ್ಯಾರ್ಥಿಗಳಿಗಾಗಿ ಶ್ರವಣ ಸಾಧನ) ಜಾಗೃತಿ ಅಭಿಯಾನ ಜಾಥಾ ಕಾರ್ಯಕ್ರಮದ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳಿಗಾಗಿ ವಿವಿಧ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ.

ಶ್ರೀ ಸಂಸ್ಥಾನ ಗವಿಮಠ ಜಾತ್ರಾ ಮಹೋತ್ಸವ–2025ರ ನಿಮಿತ್ತ ಜಿಲ್ಲೆಯಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಾಗೂ "ಸಕಲ ಚೇತನ" ಎಂಬ ಶೀರ್ಷಿಕೆಯ "ವಿಕಲ ಚೇತನನ ನಡೆ ಸಕಲ ಚೇತನದ ಕಡೆ" ಎಂಬ ಘೋಷವಾಕ್ಯದೊಂದಿಗೆ ಕೃತಕ ಅಂಗಾಂಗ ಜಾಗೃತಿ ಅಭಿಯಾನ ನಡಿಗೆಯ ಜಾಥಾವನ್ನು ಹಮ್ಮಿಕೊಳ್ಳಲಿರುವ ಶ್ರೀ ಗವಿಮಠ, ಕೊಪ್ಪಳ ರವರ ವಿಭಿನ್ನ ಸಾಮಾಜಿಕ ಕಳಕಳಿಯ ಕಾರ್ಯಕ್ರಮಕ್ಕೆ ಕೊಪ್ಪಳ ಜಿಲ್ಲಾಡಳಿತವು ಸಹಭಾಗಿತ್ವ ನೀಡಿದ್ದು, ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ವಿದ್ಯಾರ್ಥಿಗಳಿಗೆ ಭಾಷಣ ಸ್ಪರ್ಧೆ: ಜಿಲ್ಲೆಯ ಪ್ರೌಢಶಾಲೆ, ಪದವಿ ಪೂರ್ವ ಮತ್ತು ಪದವಿ ವಿಭಾಗಕ್ಕೆ "ವಿಕಲಚೇತನರು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಸಮಾಜದ ಸ್ಪಂದನೆ" ಎಂಬ ವಿಷಯದ ಭಾಷಣ ಸ್ಪರ್ಧೆಯನ್ನು ಜಿಲ್ಲೆಯ ಪ್ರತಿ ಶಾಲಾ ಕಾಲೇಜುಗಳಲ್ಲಿ ಸ್ಪರ್ಧೆಯನ್ನು 2025ರ ಜನವರಿ 2 ರಂದು ಆಯೋಜಿಸಿ, ಶಾಲಾ ಕಾಲೇಜು ಮಟ್ಟದಲ್ಲಿ ಆಯ್ಕೆಯಾದ 3 ವಿಭಾಗದ ವಿದ್ಯಾರ್ಥಿಗಳಿಗೆ ಜ. 4 ರಂದು ಶ್ರೀ ಗವಿಸಿದ್ದೇಶ್ವರ ಪದವಿ ಮಹಾವಿದ್ಯಾಲಯದಲ್ಲಿ ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಮಟ್ಟದ ಭಾಷಣ ಸ್ಪರ್ಧೆಯನ್ನು ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ. ಜಿಲ್ಲೆಯ ಎಲ್ಲಾ ಶಾಲಾ ಕಾಲೇಜಿನ ಮುಖ್ಯಸ್ಥರು ಸ್ಪರ್ಧೆಯ ದಿನಾಂಕದಂದು ಶಾಲಾ ಕಾಲೇಜುಗಳಲ್ಲಿ ಭಾಷಣ ಸ್ಪರ್ಧೆಯನ್ನು ಏರ್ಪಡಿಸಿ ಈ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಗಳಿಸಿದ ವಿದ್ಯಾರ್ಥಿಗಳನ್ನು ಒಬ್ಬ ಶಿಕ್ಷಕ ಅಥವಾ ಉಪನ್ಯಾಸಕರೊಂದಿಗೆ ಕಳುಹಿಸಿಕೊಡುವುದು.

ಜಿಲ್ಲೆಯಾದ್ಯಂತ ಜಾಗೃತಿ ನಡಿಗೆ: ಜನವರಿ 11 ರಂದು "ಸಕಲ ಚೇತನ" ಎಂಬ ಶೀರ್ಷಿಕೆಯ "ವಿಕಲ ಚೇತನನ ನಡೆ ಸಕಲ ಚೇತನದ ಕಡೆ" ಎಂಬ ಘೋಷವಾಕ್ಯದೊಂದಿಗೆ ಜಿಲ್ಲೆಯ ಪ್ರೌಢಶಾಲೆ, ಪದವಿಪೂರ್ವ ಮತ್ತು ಇತರೆ ಎಲ್ಲಾ ಕಾಲೇಜುಗಳು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಜಾಗೃತಿ ನಡಿಗೆಯನ್ನು ಆಯೋಜಿಸಬೇಕು.

ಕೊಪ್ಪಳ ನಗರದಲ್ಲಿ ಜಾಗೃತಿ ನಡಿಗೆ: ಜ. 11 ರಂದು ಬೆಳಿಗ್ಗೆ 8 ಗಂಟೆಗೆ "ಸಕಲ ಚೇತನ" ಎಂಬ ಶೀರ್ಷಿಕೆಯ "ವಿಕಲ ಚೇತನನ ನಡೆ ಸಕಲ ಚೇತನದ ಕಡೆ" ಎಂಬ ಘೋಷವಾಕ್ಯದೊಂದಿಗೆ ಅಭಿಯಾನವನ್ನು ಕೊಪ್ಪಳ ನಗರದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು (ತಾಲೂಕು ಕ್ರೀಡಾಂಗಣ)ದಿಂದ ಆರಂಭವಾಗಿ ಅಶೋಕ ವೃತ್ತ, ಗಡಿಯಾರ ಕಂಬದ ಮೂಲಕ ಶ್ರೀ ಗವಿಮಠ ತಲುಪುವ ನಡಿಗೆಯ ಜಾಥಾಕ್ಕೆ ಕೊಪ್ಪಳ ನಗರದ ಎಲ್ಲಾ ಸರಕಾರಿ, ಅನುದಾನಿತ, ಖಾಸಗಿ ಪ್ರೌಢಶಾಲೆಗಳು, ಪದವಿ ಪೂರ್ವ, ಪದವಿ, ಸ್ನಾತಕೋತ್ತರ ಕೇಂದ್ರಗಳು ಮತ್ತು ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸುವಂತೆ ಸಂಬಂಧಿಸಿದ ಇಲಾಖೆಗಳು ಕ್ರಮ ವಹಿಸಬೇಕು.

ಈ ಎಲ್ಲಾ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಯೋಜಿಸಲು ಹಾಗೂ ಮುಂದಿನ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ನಲಿನ್ ಅತುಲ್ ಅವರು ಆದೇಶಿಸಿದ್ದಾರೆ.

# ಕೊಪ್ಪಳ: ವಿವಿಧ ವಸತಿ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳು ಮನೆಗಳನ್ನು ಪೂರ್ಣಗೊಳಿಸಿಕೊಳ್ಳಿ

**ಕೊಪ್ಪಳ :** ಡಾ ಬಿ.ಆರ್.ಅಂಬೇಡ್ಕರ್ ನಗರ ವಸತಿ, ವಾಜಪೇಯಿ ನಗರ ವಸತಿ ಯೋಜನೆಯ, ಪಿಎಂಎವೈ(ಯು) ನಗರ ವಸತಿ ಯೋಜನೆಯ ಹಾಗೂ ದೇವರಾಜ ಅರಸ ನಗರ ವಸತಿ ಯೋಜನೆಯಡಿಯ ಆಯ್ಕೆಯಾದ ಕೊಪ್ಪಳ ನಗರದ ಫಲಾನುಭವಿಗಳು ಮನೆಗಳನ್ನು ಪೂರ್ಣಗೊಳಿಸಿಕೊಳ್ಳುವಂತೆ ನಗರಸಭೆ ಪೌರಾಯುಕ್ತರು ತಿಳಿಸಿದ್ದಾರೆ.

ಕೊಪ್ಪಳ ನಗರಸಭೆ ವ್ಯಾಪ್ತಿಯಲ್ಲಿ ಸನ್ 2015–16 ರಿಂದ 2021–22ನೇ ಸಾಲಿನಲ್ಲಿ ಡಾ ಬಿ.ಆರ್. ಅಂಬೇಡ್ಕರ್ ನಗರ ವಸತಿ,

ವಾಜಪೇಯಿ ನಗರ ವಸತಿ ಯೋಜನೆಯ, ಪಿಎಂಎವೈ(ಯು) ನಗರ ವಸತಿ ಯೋಜನೆಯ ಹಾಗೂ ದೇವರಾಜ ಅರಸ ನಗರ ವಸತಿ ಯೋಜನೆಯಡಿಯ ಆಯ್ಕೆಯಾದ ಫಲಾನುಭವಿಗಳಿಗೆ ಈಗಾಗಲೇ ಹಲವು ಬಾರಿ ನೋಟಿಸ್ ಜಾರಿಮಾಡಲಾಗಿದೆ ಮತ್ತು ಫಲಾನುಭವಿಗಳಿಗೆ ಮೌಖಿವಾಗಿಯು ತಿಳಿಸಲಾಗಿದ್ದರು ಸಹ ಮನೆ ನಿರ್ಮಾಣ ಮಾಡಿಕೊಂಡಿರುವುದಿಲ್ಲ. ಆದಕಾರಣ ಈ ಫಲಾನುಭವಿಗಳು ವಿವಿಧ ಹಂತದಲ್ಲಿರುವ ಮನೆಗಳನ್ನು ತುರ್ತಾಗಿ ಪೂರ್ಣಗೊಳಿಸಿ ಕೊಪ್ಪಳ ನಗರಸಭೆ ಆಶ್ರಯ ಶಾಖೆಯ ಗಮನಕ್ಕೆ ತರಬೇಕು. ಇಲ್ಲವಾದಲ್ಲಿ ರಾಜ್ಯ ಸರ್ಕಾರದ ಹಾಗೂ ಕೇಂದ್ರ ಸರ್ಕಾರದ ಸಹಾಯಧನ ಬಿಡುಗಡೆಯಾಗುವುದಿಲ್ಲ. ಇದಕ್ಕೆ ಕೊಪ್ಪಳ ನಗರಸಭೆಯ ಹೊಣೆಯಾಗಿರುವುದಿಲ್ಲ ಮತ್ತು ರದ್ದು ಮಾಡಲು ಸರ್ಕಾರಕ್ಕೆ ನಿಯಮನುಸಾರ ಶಿಫಾರಸ್ಸು ಮಾಡಲಾಗುವುದು ಎಂದು ಕೊಪ್ಪಳ ನಗರಸಭೆ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

# ಮಶೆವ್ವದೇವಿ ಜಾತ್ರೆ: ಪರಿಕರಗಳ ಬಿಡುಗಡೆ



**ಬನಹಟ್ಟಿ :** ನಗರದ ಆರಾಧ್ಯ ದೇವತೆ ಮಶೆವ್ವದೇವಿ ಜಾತ್ರಾ ಮಹೋತ್ಸವದ ಪರಿಕರಗಳನ್ನು ಸಮಸ್ತ ಹಿರಿಯರಿಂದ ಬಿಡುಗಡೆ ಗೊಳಿಸಲಾಯಿತು.

ಜನೇವರಿ 12 ರಂದು ಜರುಗುವ ಜಾತ್ರೆಯಲ್ಲಿ ಬೆಳಿಗ್ಗೆ 5 ಕ್ಕೆ ಅಭಿಷೇಕ, 6 ಕ್ಕೆ ಘಣದುರ್ಗಾ ಹೋಮ ಮತ್ತು ನವಗ್ರಹ ಪೂಜೆ ಹಾಗು ಬೆಳಿಗ್ಗೆ 9 ಗಂಟೆಗೆ ಮಶೆವ್ವದೇವಿಗೆ 25 ಗ್ರಾಂ ಬಂಗಾರದ ನವರತ್ನ ಹಾರ ಸಮರ್ಪಣೆ ಕಾರ್ಯಕ್ರಮ ಜರುಗಲಿದೆ ಎಂದು ಸಮಿತಿ ಅಧ್ಯಕ್ಷ ಬಸವರಾಜ ಗಿಡದಾನಪ್ಪಗೋಳ ತಿಳಿಸಿದ್ದಾರೆ.

ಕಾರ್ಯಕ್ರಮದಲ್ಲಿ ಹಿರೇಮಠದ ಶರಣಬಸವ ಶಿವಾಚಾರ್ಯರು, ಶಾಸಕ ಸಿದ್ದು ಸವದಿ, ಶಾಸಕಿ ಡಾಕ್ಟರ್ ಉಮಾಶ್ರೀ, ಶಾಸಕ ಜಗದೀಶ ಗುಡಗುಂಟಿ, ಮಾಜಿ ಶಾಸಕ ಆನಂದ ನ್ಯಾಮಗೌಡ, ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ ಸೇರಿದಂತೆ ಅನೇಕ ಹಿರಿಯರು ಪಾಲ್ಗೊಳ್ಳಲಿದ್ದಾರೆ.

# ರಬಕವಿಯಲ್ಲಿ ಬ್ರಹ್ಮಾನಂದ ಉತ್ಸವ: ಗಮನ ಸೆಳೆದ ರೊಟ್ಟಿ ಜಾತ್ರೆ



**ರಬಕವಿ :** ನಗರದಲ್ಲಿ ನಡೆಯುತ್ತಿರುವ ಬ್ರಹ್ಮಾನಂದ ಉತ್ಸವದ ಅಂಗವಾಗಿ ವಿವಿಧ ಸಮಾಜದ ಮಹಿಳೆಯರು ಮಂಗಳವಾರ ನಡೆಸಿದ ರೊಟ್ಟಿ ಜಾತ್ರೆ ಎಲ್ಲರ ಗಮನ ಸೆಳೆಯಿತು.

ನಿರಂತರ ಹದಿನೇಳು ದಿನಗಳ ಕಾಲ ಮಠದಲ್ಲಿ ಧಾರ್ಮಿಕ ಕಾರ್ಯಕ್ರಮ ನಡೆಯಲಿದೆ. ಈ ಸಂದರ್ಭದಲ್ಲಿ ಪ್ರಸಾದ ವ್ಯವಸ್ಥೆಗಾಗಿ ರಬಕವಿ ಹಾಗೂ ಸುತ್ತ ಮುತ್ತಲಿನ ಭಾಗದ ವಿವಿಧ ಸಮಾಜದ ನೂರಾರು ಮಹಿಳೆಯರು ರೊಟ್ಟಿಯನ್ನು ಮಠಕ್ಕೆ ನೀಡಿದರು.

ನಗರದ ಶಂಕರಲಿಂಗ ದೇವಸ್ಥಾನದಲ್ಲಿ ಗುರುಸಿದ್ಧೇಶ್ವರ ಸ್ವಾಮೀಜಿಯವರು ರೊಟ್ಟಿ ಜಾತ್ರೆಗೆ ಚಾಲನೆ ನೀಡಿದರು. ಮಹಿಳೆಯರು ಓಂ ನಮಃ ಶಿವಾಯ ಮಂತ್ರವನ್ನು ಜಪಿಸುತ್ತ ಪವಿತ್ರ ರೊಟ್ಟಿಯ ಬುಟ್ಟಿಯನ್ನು ತಲೆಯ ಮೇಲೆ ಹೊತ್ತುಕೊಂಡು ಮೆರವಣಿಗೆಯಲ್ಲಿ ಸಾಗಿದರು.

ಮೆರವಣಿಗೆಯಲ್ಲಿ ರಾಮಣ್ಣ ಹುಲಕುಂದ, ಮುರಿಗೆಪ್ಪ ಮಿರ್ಜಿ, ಮಾರುತಿ ಗಂಥಡೆ, ಧರೆಪ್ಪ ಉಳ್ಳಾಗಡ್ಡಿ, ಸಂಗಪ್ಪ ಕುಂದಗೋಳ, ಸವಿತಾ ಹೊಸೂರ, ದಾನಮ್ಮ ಬಾಗಲಮನಿ, ಗಿರಿಜಾ ತುಂಗಳ, ಮಹಾದೇವಿ ಪಚಡಿ, ಮಹಾನಂದಾ ಹೊರಟ್ಟಿ, ಕಾವೇರಿ ಬಾಗಲಮನಿ, ಸುನಂದಾ ಕುಲಗೋಡ, ಗೌರವ್ವ ನಿಲಜಗಿ, ಲಕ್ಷ್ಮಿ ಕುಂಬಾರ, ಅನ್ನಪೂರ್ಣಾ ಉರಭಿನವರ ಸೇರಿದಂತೆ ನೂರಾರು ಮಹಿಳೆಯರು ರೊಟ್ಟಿಯ ಜಾತ್ರೆಯಲ್ಲಿ ಭಾಗವಹಿಸಿದ್ದರು.

# ಸಂಗೀತ ಕಲೆ ಆಸ್ವಾದಿಸುವ, ಪ್ರೋತ್ಸಾಹಿಸುವ ಮನಸ್ಸುಗಳು ಬೇಕು



**ಇಂಡಿ :** ಶ್ರೀಮಂತ ಕಲಾ ಪ್ರಕಾರವಾಗಿರುವ ಸಂಗೀತ ಕಲೆಯನ್ನು ಆಸ್ವಾದಿಸುವ ಮತ್ತು ಪ್ರೋತ್ಸಾಹಿಸುವ ಮನಸ್ಸುಗಳು ಬೇಕಿದೆ ಎಂದು ನ್ಯಾಯವಾದಿ ವಿವೇಕಾನಂದ ಹಂಜಗಿ ಹೇಳಿದರು. ಪಟ್ಟಣದ ಗೌಡರ ಓಣಿಯ ಶ್ರೀ ರಾಘವೇಂದ್ರ ಮಠದಲ್ಲಿ ನೂತನವಾಗಿ ಪ್ರಾರಂಭಿಸುವ ಶ್ರೀ ವೀರಕ್ತೇಶ್ವರ ಸಂಗೀತ ಪಾಠಶಾಲೆ ಪ್ರಾರಂಭೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು.

ಅದ್ಯಕ್ಷತೆ ವಹಿಸಿದ ನ್ಯಾಯವಾದಿ ಜಿ.ಎಸ್. ಜೋಶಿ ಸಂಗೀತಬಗ್ಗೆ ಜನರಲ್ಲಿ ಅಷ್ಟಾಗಿ ಅರಿವಿಲ್ಲ. ಪ್ರೇಕ್ಷಕರನ್ನು ಸೃಷ್ಟಿ ಮಾಡದಿದ್ದರೆ ಸಂಗೀತ ಎಷ್ಟೇ ಶ್ರೀಮಂತವಾಗಿದ್ದರೂ ಪ್ರಯೋಜನ ಆಗುವದಿಲ್ಲ. ಸಂಗೀತ ಮಾತ್ರವಲ್ಲದೆ ಯಾವುದೇ ಕಲೆಗಳು ಉಳಿಯಬೇಕಾದರೆ ಪ್ರೋತ್ಸಾಹಿಸುವವರ ಅಗತ್ಯವಿದೆ ಎಂದರು.

ಮತ್ತು ಇಂಡಿ ಪಟ್ಟಣದಲ್ಲಿ ಸಂಗೀತ ಪಾಠಶಾಲೆ ಪ್ರಾರಂಭಿಸಿದ್ದು ಅದರ ಲಾಭ ಪಡೆಯಲು ವಿನಂತಿಸಿದರು.

ಶಿಕ್ಷಣ ಸಂಯೋಜಕ ಎ.ಸಿ.ಹುಣಸಗಿ ಮಾತನಾಡಿ ಸಂಗೀತ ನಗರಪ್ರದೇಶದಲ್ಲಿ ಒತ್ತು ಕೊಡುವ ಕಾಲಘಟ್ಟದಲ್ಲಿ ಇಂಡಿ ತಾಲೂಕಿನಲ್ಲಿ ಅದನ್ನು ಮೀರಿ ಗ್ರಾಮೀಣ ಮಗುವಿಗೆ ತರಬೇತಿ ನೀಡಬೇಕಾಗಿದೆ.

ಮಗುವಿನ ಪ್ರತಿಭೆ ಯನ್ನು ಪೋಷಿಸುತ್ತಿರುವ ತಂದೆ ತಾಯಿಯರಿಗೂ ಮಾದರಿಯಾಗಿದೆ. ಬೆಳೆಯುವ ಪೈರು ಮೊಳಕೆಯಲ್ಲಿ ಎಂಬಂತೆ ಮಗುವಿನ ಪ್ರತಿಭೆಗೆ ಪೂರಕವಾಗಿನೀರೆರೆ ಯುವ ಕೆಲಸ ಮಾಡಿದ್ದಾರೆ ಶ್ರೀ ವೀರಕ್ತೇಶ್ವರ ಸಂಗೀತ ಪಾಠಶಾಲೆ ಎಂದರು.

ಸಂಗೀತ ಶಿಕ್ಷಕ ಮುರಲೀಧರ ಗುಬ್ಬೆವಾಡ ಮಾತನಾಡಿ ಮನುಷ್ಯನು ಜೀವನದಲ್ಲಿ ಕಲಿಯಲು ಗುರುಗಳು ಇರಬೇಕು. ಗುರು ಮತ್ತು ಗುರಿ ಇದ್ದಾಗ ಮಾತ್ರ ಸಾಧನೆ ಸಾಧ್ಯ. ಸಾದನೆಯನ್ನು ಹುಡುಕುತ್ತ ಹೋಗಬಾರದು ಸಾಧನೆಯೇ ನಮ್ಮನ್ನು ಹುಡುಕಿಕೊಂಡು ಬರಬೇಕು. ಪೋಷಕರು ಮಕ್ಕಳ ಪ್ರತಿಭೆ ಗುರುತಿಸಿ ಪ್ರೋತ್ಸಾಹಿಸಿದರೆ ಸಾಧನೆ ಹಾದಿಯಲ್ಲಿ ಸಾಗಲು ಸಾಧ್ಯ ಎಂದರು.

ಇಂಡಿ ರಾಘವೇಂದ್ರ ಮಠದ ಪೂಜ್ಯ ಶ್ರೀ ಜಗನ್ನಾಥ ಜಾಗೀರದಾರ ಮಾತನಾಡಿ ಭಾರತೀಯ ಸಂಸ್ಕೃತಿಯಲ್ಲಿ ಸಂಗೀತ ಕಲೆಗೆ ವಿಶೇಷ ಸ್ಥಾನಮಾನವಿದೆ. ಸರಸ್ವತಿ ಎಲ್ಲರಿಗೂ ಒಲಿಯುವದಿಲ್ಲ.ಕಲೆಯ ಬಗ್ಗೆ ಅಪಾರ ಗೌರವ ವಿಟ್ಟು ಕೊಂಡು ಆಸ್ವಾದಿಸಿದವರಲ್ಲಿ ಮಾತ್ರ ಸಂಗೀತ ಒಲಿಯಲು ಸಾಧ್ಯ. ಅಂತಹ ಕಾರ್ಯದಲ್ಲಿ ಗ್ರಾಮೀಣ ಪ್ರತಿಭೆಗಳು ಬರಬೇಕಾಗಿದೆ ಎಂದರು.

ಭಾವ ತಾಳ ಸಮ್ಮಿಲನವೇ ಸಂಗೀತ, ಕಲೆಯನ್ನು ಆರಾಧಿಸಲು ಮತ್ತು ಕಲಿಯಲು ಜಾತಿ ಎಂಬುದು ಇಲ್ಲ, ರಂಗ ಪ್ರವೇಶ ಮಾಡುವದು ಸಾಮಾನ್ಯ ಕೆಲಸವಲ್ಲ ಎಂದರು.

ಸಂಗೀತ ಶಾಲೆಯ ಪ್ರಾಚಾರ್ಯ ಶ್ರೀಕಾಂತ ಕಟ್ಟಿಮನಿ, ಪ್ರಕಾಶ ಕಟ್ಟಿಮನಿ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟು ಮಾತನಾಡಿದರು.


# ಎಸ್.ಎಫ್.ಸಿ & ಸ್ಥಳೀಯ ನಿಧಿಯ ಯೋಜನೆಯಡಿ ಅರ್ಜಿ

**ಬಾಗಲಕೋಟೆ :** ಪ್ರಸಕ್ತ ಸಾಲಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಲ್ಯಾಣಕ್ಕಾಗಿ ಶೇ.24.10 ರಷ್ಟು, ಅನುದಾನದಡಿಯಲ್ಲಿ ಬಾಗಲಕೋಟೆ ನಗರಸಭೆ ವ್ಯಾಪ್ತಿಯಲ್ಲಿ ವಾಸಿಸುವ ಫಲಾನುಭವಿಗಳಿಂದ ವೈಯಕ್ತಿಕ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವ ಕೊನೆಯ ದಿನ ಜನವರಿ 30, 2025 ಆಗಿದ್ದು, ಯೋಜನೆಗಳ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ನಗರಸಭೆ, ಬಾಗಲಕೋಟೆ ದೂಸಂ.08354-235501 ಗೆ ಸಂಪರ್ಕಿಸುವಂತೆ ನಗರಸಭೆ ಪೌರಾಯುಕ್ತ ವಾಸಣ್ಣ ಆರ್. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# 2ನೇ ಕನ್ನಡ ಸಾಹಿತ್ಯ ಸಮ್ಮೇಳನ ಸಂಭ್ರಮ

**ಆಲಮೇಲ :** ಕನ್ನಡ ಸಾಹಿತ್ಯ ಪರಿಷತ್ತು ಆಲಮೇಲ ಘಟಕದ ಸಂಯೋಜನೆಯಲ್ಲಿ ತಾಲೂಕಿನ ವಿಭೂತಿಹಳ್ಳಿ ಗ್ರಾಮದಲ್ಲಿ ಎರಡನೇ ಕನ್ನಡ ಸಾಹಿತ್ಯ ಸಮ್ಮೇಳನ ಸಂಭ್ರಮದಿಂದ ಜರುಗಿತು.

ಪ್ರಥಮವಾಗಿ ರಾಷ್ಟ್ರಧ್ವಜ ಮತ್ತು ನಾಡಧ್ವಜದ ಧ್ವಜಾರೋಹಣ ಕಾರ್ಯಕ್ರಮವನ್ನ ಗೌರವಾಧ್ಯಕ್ಷರಾದ ಡಾ.ಸಂದೀಪ ಪಾಟೀಲ, ವಿಜಯಪುರ ಜಿಲ್ಲಾ ಕಸಾಪ ಅಧ್ಯಕ್ಷ ಹಾಸೀಂಪೀರ್ ವಾಲೀಕಾರ ಹಾಗೂ ಕ್ಷೇತ್ರಶಿಕ್ಷಣಾಧಿಕಾರಿ ಮಹಂತೇಶ್ ಯಡ್ರಾಮಿ ಧ್ವಜಾರೋಹಣ ನೆರವೇರಿಸಿ ಸರ್ವಾಧ್ಯಕ್ಷರ ಮೆರವಣಿಗೆಗೆ ಚಾಲನೆ ನೀಡಿದರು.





ಭವ್ಯವಾದ ಮೆರವಣಿಗೆಯಲ್ಲಿ ಜನಪದ ಕಲಾತಂಡಗಳು, ಡೊಳ್ಳು ಕುಣಿತ, ಶಾಲಾ ಮಕ್ಕಳಿಂದ ಕನ್ನಡದ ಬಾವುಟ ಹಾರಾಡುತ್ತಿದುದ್ದು, ಕನ್ನಡ ಪರ ಸಂಘಟನೆಗಳು ತಾಲೂಕಿನ ಶಿಕ್ಷಕರು, ಗುರುಮಾತೆಯರು, ವಿದ್ಯಾರ್ಥಿಗಳು ಸರ್ವಾಧ್ಯಕ್ಷರ ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದರು. ಸಭಾಧ್ಯಕ್ಷರ ಸಾರೋಟ ಮೆರವಣಿಗೆಯಲ್ಲಿ ವಿಶೇಷ ಅಲಂಕಾರ ಮಾಡಿ ತೆರೆದ ವಾಹನದಲ್ಲಿ ವಾದ್ಯ ವೈಭವದ ಮೂಲಕ ಮೆರವಣಿಗೆ ಮೂಲಕ ಭಾಗ್ಯವಂತಿ ವೇದಿಕೆಗೆ ಸಂಭ್ರಮದಿಂದ ಬರಮಾಡಿಕೊಂಡರು.ಸರ್ವಾಧ್ಯಕ್ಷರಾದ ವೇ॥ ಚೆನ್ನವೀರಯ್ಯ ಹಿರೇಮಠರವರು ಮಾತನಾಡಿ ಪ್ರಾಚೀನ ಭಾಷೆಗಳಲ್ಲಿ ಕನ್ನಡವು ಒಂದು ಕನ್ನಡ ನಾಡು ನುಡಿಗೆ ಪ್ರತಿಯೊಬ್ಬರು ಶ್ರಮಿಸಿ ಕನ್ನಡದ ನೆಲ ಜಲ ನಮ್ಮ ಹಕ್ಕು ಎಂದು ಕನ್ನಡ ನಮ್ಮ ಮಾತೃಭಾಷೆಯ ಮೂಲಕ ತಮ್ಮ ಅನಿಸಿಕೆಗಳನ್ನು ತಾವು ಮಾಡಿದ ಕನ್ನಡದ ಹೋರಾಟದ ಹಾದಿಯ ಬದುಕಿನ ನೋಟವನ್ನು ಬಿತ್ತರಿಸಿದರು. ಕನ್ನಡದ ಪರ ಮನಸ್ಸುಗಳು ಒಂದಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಶಾಸಕ ಅಶೋಕ ಮನಗೂಳಿ ಕನ್ನಡಾಂಬೆಯ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಉದ್ಘಾಟಿಸಿ ಚಾಲನೆ ನೀಡಿದರು, ಮಾಜಿ ಶಾಸಕ ರಮೇಶ ಭೂಸನೂರ ಸ್ಮರಣ ಸಂಚಿಕೆ ಬಿಡುಗಡೆಗೊಳಿಸಿದರು. ಆಲಮೇಲ ಪಟ್ಟಣ ಪಂಚಾಯಿತಿ ಅಧ್ಯಕ್ಷ ಸಾಧಿಕ್ ಸುಂಬುಡ ಸಮ್ಮೇಳನ ಅಧ್ಯಕ್ಷರ ನುಡಿ ಪುಸ್ತಕ ಬಿಡುಗಡೆಗೊಳಿಸಿದರು. ಗೊಳಸಾರದ ಅಭಿನವ ಪುಂಡಲಿಂಗ ಶಿವಯೋಗಿಗಳು, ಶಂಕರಾನಂದ ಮಹಾರಾಜರು, ದೇವರಗುಡ್ಡದ ಗುರುಗಳು ಡಾ.ಸಂದೀಪ ಪಾಟೀಲರು ದಿವ್ಯ ಸಾನಿಧ್ಯ ವಹಿಸಿದರು. ಕಸಾಪ ಅಧ್ಯಕ್ಷ ಶಿವಶರಣ ಗುಂದಗಿ ಪ್ರಾಸ್ತಾವಿಕವಾಗಿ ಮಾತನಾಡಿ ಎಲ್ಲರನ್ನ ಪರಿಚಯಿಸಿಸ್ವಾಗತಿಸಿ,ಗ್ರಾಮೀಣಪ್ರದೇಶದಲ್ಲಿ ಸಂಭ್ರಮದಿಂದ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯಲು ಕಸಾಪ ಘಟಕದ ಪದಾಧಿಕಾರಿಗಳು ಹಾಗೂ ವಿಭೂತಿಹಳ್ಳಿ ಗ್ರಾಮಸ್ಥರಿಗೆ ಹಾಗೂ ಕಾರ್ಯಕ್ರಮಕ್ಕೆ ಆಗಮಿಸಿದ ಎಲ್ಲಾ ಗಣ್ಯರಿಗೆ ಕೃತಜ್ಞತೆಯನ್ನು ಸಲ್ಲಿಸಿ ನೂತನ ಆಲಮೇಲ ತಾಲೂಕಿನಲ್ಲಿ ಕಸಾಪ ಕಾರ್ಯಾಲಯ ಮತ್ತು ಸಭಾ ಭವನ ಕಟ್ಟಡಕ್ಕೆಮಾನ್ಯಶಾಸಕರು50ಲಕ್ಷರೂಪಾಯಿ ಅನುದಾನ ಬಿಡುಗಡೆಗೊಳಿಸಲು ತಾಲೂಕ ಕಸಾಪ ಘಟಕದ ಪರವಾಗಿ ಮನವಿ ಮಾಡಿದರು. ವಿಭೂತಿ ಹಳ್ಳಿ ಗ್ರಾಮಸ್ಥರು ಅನ್ನದಾಸೋಹದ ವ್ಯವಸ್ಥೆಯನ್ನು, ನೀರಿನ ವ್ಯವಸ್ಥೆಯನ್ನು ಹಲವಾರು ಬಗೆಬಗೆಯ ಆಹಾರ ಪದಾರ್ಥಗಳೊಂದಿಗೆ ಅತಿಥಿಗಳಿಗೆ ಅನ್ನ ದಾಸೋಹ ಮಾಡಿದರು. ಅನೇಕ ಯುವಕರು, ಅತಿಥಿಗಳಿಗೆ ಸತ್ಕಾರದಿಂದ ಬರಮಾಡಿಕೊಂಡು ಸೇವೆ ಮಾಡಿದರು.

ವಚನಗೋಷ್ಠಿ, ಜಾನಪದಗೋಷ್ಠಿ ಮತ್ತು ಕವಿಗೋಷ್ಠಿಗಳು ವಿಶೇಷವಾಗಿ ತಮ್ಮ ಅನುಭವದ ಮೂಲಕ ವಾಚಿಸಿದರು. ಜಾನಪದ ಗೋಷ್ಠಿ ಬಾಳನಗೌಡ ಪಾಟೀಲರರು ಗ್ರಾಮೀಣ ಸೊಗಡಿನಲ್ಲಿ ಪದಗಳ ಮೂಲಕ ಜಾನಪದ ಸಾಹಿತ್ಯದಲ್ಲಿನ ತಮ್ಮ ಅನುಭವವನ್ನು ಹಂಚಿದರು. ಕವಿಗೋಷ್ಠಿಯಲ್ಲಿ ಶ್ರೀಮತಿ ಶುಭಮಂಗಳ ಜೋಗೋರ, ಶ್ರೀಮತಿ ಎಂ,ಎನ್ ಯಾತನೂರ,ಲಕ್ಷ್ಮೀಪುತ್ರಕಿರನಹಳ್ಳಿ,ಅನಿಲ್. ಹೆಚ್. ಎಂ. ಎಂ. ಎಂ. ಮುಲ್ಲಾ. ಹಲವಾರು ಕವಿಗಳು ಭಾಗವಹಿಸಿ ತಮ್ಮ ಕವನ ವಾಚನ ಮಾಡಿದರು. ನಿಕಟ ಪೂರ್ವ ಕಸಾಪ ಅಧ್ಯಕ್ಷ ಸಿದ್ದರಾಮ ಉಪ್ಪಿನ, ಪತ್ರಕರ್ತ ಪಂಡಿತ ಎಂಪುರೆ, ಪ್ರೋ. ರಮೇಶ ಗಂಗನಹಳ್ಳಿ, ಆನಂದ ಭೂಸನೂರ, ಅಶೋಕ ತೆಲ್ಲೂರ, ಆರ್. ಎಚ್. ಬಿರಾದಾರ, ಅನ್ನದಾನಪ್ಪ ವಿಭೂತಿ, ಅಪ್ಪು ಶೆಟ್ಟಿ, ಅಶೋಕ ಕೊಳಾರಿ, ಸೋಮು ಪೂಜಾರಿ, ರವಿ ಹೊಸಮನಿ, ಜೋಶಿ, ಎಂ.ಪಿ. ಬಿಸೆ, ಪ್ರಕಾಶ ಜಿಂಗಾಡೆ, ಕಾರ್ಯಕ್ರಮದಲ್ಲಿ ರಮೇಶ ಭಂಟನೂರ ಸ್ವಾಗತಿಸಿದರು, ಪ್ರೋ. ಗಂಗಾದರ್ ಪತ್ತಾರ ನಿರೂಪಣೆ ಮಾಡಿದರು. ಶ್ರೀಶೈಲ ಮಠಪತಿ ವಂದಿಸಿದರು.

# ಬಿಜೆಪಿಗೆ ಹೆಚ್ಚು ಬೆಂಬಲ ನೀಡುವಂತೆ ಕಾರ್ಯಕರ್ತರಿಗೆ ಯುವ ನಾಯಕ ಸರ್ವೋತ್ತಮ ಜಾರಕಿಹೊಳಿ ಕರೆ

**ಹಳ್ಳೂರ :** ಭಾರತೀಯ ಜನತಾ ಪಕ್ಷವನ್ನು ಗಟ್ಟಿಗೊಳಿಸುವ ಸಲುವಾಗಿ ಗ್ರಾಮದ ಎಲ್ಲಾ ಬೂತ ಮಟ್ಟದಲ್ಲಿ ಸಭೆ ನಡೆಸಿ ಪ್ರಧಾನ ಮಂತ್ರಿ ನರೇಂದ್ರ ಮೋದಿಜೀವರ ಅಭಿವೃದ್ಧಿ ಕಾರ್ಯಗಳ ಬಗ್ಗೆ ತಿಳುವಳಿಕೆ ಹೇಳಿ ಮುಂದಿನ ದಿನಗಳಲ್ಲಿ ಬಿಜೆಪಿಗೆ ಹೆಚ್ಚು ಬೆಂಬಲ ನೀಡುವಂತೆ ಕಾರ್ಯಕರ್ತ-ರಿಗೆ ಯುವ ನಾಯಕ ಸರ್ವೋತ್ತಮ ಜಾರಕಿಹೊಳಿ ಕರೆ ನೀಡಿದರು.




ಅವರು ಗ್ರಾಮದ ಶ್ರೀ ಮಹಾಲಕ್ಷ್ಮೀ ದೇವಿ ದೇವಸ್ಥಾನದಲ್ಲಿ ಭಾರತೀಯ ಜನತಾ ಪಾರ್ಟಿ ಅರಬಾಂವಿ ಮಂಡಲದ ಭೂತ ಸಮಿತಿ ರಚನೆ ಕಾರ್ಯಕ್ರಮದಲ್ಲಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದರು. ಬಿಜೆಪಿ ಜಿಲ್ಲಾಧ್ಯಕ್ಷರಾದ ಸುಭಾಸ ಪಾಟೀಲ ಮಾತನಾಡಿ ಭಾರತೀಯ ಜನತಾ ಪಾರ್ಟಿ ಸುಭದ್ರಗೊಳಿಸು ಮುಂಬರುವ ಚುನಾವಣೆಗಳಲ್ಲಿ ಗೆಲುವು ಸಾಧಿಸಬೇಕಾದರೆ ಕಾರ್ಯಕರ್ತರು ಒಗ್ಗಟ್ಟಾಗಿರಬೇಕು. ಭೂತ ಸಮಿತಿ ರಚನೆ ಕು-ರಿತು ಮಾಹಿತಿ ನೀಡಿದರು. ಈ ಸಮಯದಲ್ಲಿ ಅಬ್ದುಲ ಮಿರ್ಜಾನಾಯ್ಕ.ರಾಷ್ಟ್ರೀಯ ಒಬಿಸಿ ಸದಸ್ಯರಾದ ಲಕ್ಷ್ಮಣ ತಪಸಿ. ಬಿಜೆಪಿ ಪ್ರಧಾನ ಕಾರ್ಯದರ್ಶಿ ಮಹಾಂತೇಶ ಕುಡಚಿ ಸೇರಿದಂತೆ ನೂರಾರು ಜನ ಬಿಜೆಪಿ ಕಾರ್ಯಕರ್ತರಿದ್ದು ಕಾರ್ಯಕ್ರಮವನ್ನು ಸಿದ್ದು ದುರದುಂಡಿ ನಿರೂಪಿಸಿ. ಮುರಿಗೆಪ್ಪ ಮಾಲಗಾರ ವಂದಿಸಿದರು.

# ಸಮಾಜವನ್ನ ಉದ್ಧರಿಸಿದ ಲಿಂ. ಚನ್ನಬಸವ ಶಿವಯೋಗಿಗಳು

**ಅಥಣಿ :** ಬಸವಣ್ಣನವರು ಭಕ್ತಿ, ಜ್ಞಾನಗಳ ಸಂಗಮವಾಗಿ ಇಡಿ ಜಗತ್ತಿಗೆ ಬೆಳಕನ್ನು ನೀಡಿದವರು ಇಂದು ಕನ್ನಡ ನಾಡಿನ ಸಾಂಸ್ಕೃತಿಕ ನಾಯಕರಾಗಿದ್ದಾರೆ. ಅವರಂತೆ ಅಖಂಡ ಮೌನವೃತದ ಮಹಾಯೋಗಿ ನಿಂಬಾಳ-ಕಲಬುರ್ಗಿಯ ಜಡೇಯ ಶಾಂತಲಿಂಗ ಸ್ವಾಮಿಜಿಯವರು ಶಿವಯೋಗ-ಮೌನಯೋಗದ ಸಾತ್ವಿಕ ಶಕ್ತಿಯಾಗಿ ಅಭಿನವ ಅಲ್ಲಮರಾಗಿ ನಮಗೆಲ್ಲ ಮಾರ್ಗದರ್ಶಿಯಾಗಿದ್ದಾರೆ ಎಂದು ಗಚ್ಚಿನಮಠದ ಶಿವಬಸವ ಸ್ವಾಮಿಜಿ ಹೇಳಿದರು.



ಸ್ಥಳೀಯ ಮೋಟಗಿಮಠದ ಲಿಂ.ಚನ್ನಬಸವ ಶಿವಯೋಗಿಗಳವರ ಲಿಂಗೈಕ್ಯ ಶತಮಾನೋತ್ಸವ ಅಂಗವಾಗಿ ಬಸವ ಚರಿತಾಮೃತ ಪ್ರವಚನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಅಥಣಿಯ ಮುರುಘೇಂದ್ರ ಶಿವಯೋಗಿಗಳು ಬಸವಣ್ಣನವರ ವಚನಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಶಿವಯೋಗ ಸಾಧನೆಯ ಮೂಲಕ ನಾಡಿಗೆ ಬೆಳಕಾದವರು. ಅವರ ಸಮಕಾಲಿನವರಾದ ಮೋಟಗಿ ಮಠದ ಚನ್ನಬಸವ ಶಿವಯೋಗಿಗಳು ಬಸವಣ್ಣನವರ ವಚನಗಳನ್ನು ಮೈಗೂಡಿಸಿಕೊಂಡು, ವಚನಗಳಂತೆ ಸರಳ ಬದುಕ ನಡೆಸಿ ಸಮಾಜವನ್ನು ಉದ್ದರಿಸಿದ್ದಾರೆ.

ಅವರ ಲಿಂಗೈಕ್ಯ ಶತಮಾನೋತ್ಸವದ ನೆನಪಿನಲ್ಲಿ ಮೋಟಗಿ ಮಠದ ಪ್ರಭು ಚನ್ನಬಸವ ಸ್ವಾಮೀಜಿ ಅವರ ನೇತೃತ್ವದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಆಯೋಜನೆ ಮಾಡುವ ಮೂಲಕ ಅವರ ಸ್ಮರಣೋತ್ಸವ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಮಾಡಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದ ಸಾನಿಧ್ಯ ವಹಿಸಿದ ಪಂಚಮಸಾಲಿ ಹರಿಹರ ಪೀಠದ ಜಗದ್ಗುರು ವಚನಾನಂದ ಸ್ವಾಮಿಜಿ ಮಾತನಾಡಿ ಅಥಣಿ ಮಹಾ ತಪಸ್ವಿಗಳ ಬೀಡು ಇಲ್ಲಿಯ ಜನರೆ ಪುಣ್ಯವಂತರು ನಾಡಿನ ಜನರು ಅಥಣಿಗೆ ಬರುತ್ತಾರೆ ಅಂತಹ ಪವಿತ್ರ ಕ್ಷೇತ್ರ ಮೂರು ಮಠಗಳು ನಿರಂತರವಾಗಿ ಭಕ್ತರಿಗೆ ಜ್ಞಾನದಾಸೊಹ, ಅನ್ನದಾಸೊಹ ನೀಡುತ್ತಿರುವುದು ಹೆಮ್ಮೆಯ ಸಂಗತಿ ಅದರಲ್ಲೂ ಮೊಟಗಿಮಠದ ಪೂಜ್ಯರು ಸಾಹಿತ್ಯಿಕವಾಗಿ, ಸಾಂಸ್ಕೃತಿಕವಾಗಿ ಅಥಣಿಯ ಹೆಸರನ್ನ ಇಡೀ ನಾಡಿನಾದ್ಯಂತ ಪಸರಿಸಿದ್ದಾರೆ ಮಹಾತ್ಮರ ಚರಿತಾಮೃತ ಮಹಾಗ್ರಂಥದ ಮೂಲಕ ಅವರ ಸೇವೆ ಸ್ಮರಣೀಯವಾಗಿದೆ ಎಂದರು.

ಕಾರ್ಯಕ್ರಮದ ನೇತೃತ್ವ ವಹಿಸಿದ ಮೊಟಗಿಮಠದ ಪ್ರಭುಚನ್ನಬಸವ ಸ್ವಾಮಿಜಿಯವರು ಮಾತನಾಡಿ ಚನ್ನಬಸವ ಶಿವಯೋಗಿಗಳವರ ಲಿಂಗೈಕ್ಯ ಶತಮಾನೋತ್ಸವ ಅತ್ಯಂತ ಸಂಭ್ರಮದಿಂದ ಇಂದು ಬಸವ ಚರಿತಾಮೃತ ಪ್ರವಚನದ ಮೂಲಕ ಉದ್ಘಾಟನೆಯಾಗಿರುವುದು ಸಂತಸ ತಂದಿದೆ. 14 ದಿನಗಳವರೆಗೆ ಬಸವ ಚರಿತಾಮೃತ ಪ್ರವಚನ ಜರುಗಲಿದೆ. ನಂತರದಲ್ಲಿ 101 ತುಲಾಭಾರ, 101 ಪೌರಕಾರ್ಮಿಕರಿಗೆ ಗೌರವ ಸನ್ಮಾನ ಹಾಗೂ 101 ಗಡಿನಾಡಿನ ಯುವ ಸಮೂಹಕ್ಕೆ ಪುರಸ್ಕಾರ ನಡೆಯಲಿದೆ ಎಂದು ತಿಳಿಸಿದರು.

ಶ್ರೀಗಳ ಭವ್ಯ ಮೆರವಣಿಗೆ : ಬಸವ ಚರಿತಾಮೃತ ಪ್ರವಚನ ಉದ್ಘಾಟನಾ ಕಾರ್ಯಕ್ರಮಕ್ಕೆ ಆಗಮಿಸಿದ್ದ ಜಡೆಯ ಶಾಂತಲಿಂಗ ಸ್ವಾಮೀಜಿ ಅವರನ್ನು ಸಾರೋಟ ಮೂಲಕ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಬರಮಾಡಿಕೊಳ್ಳಲಾಯಿತು. ಈ ಮೆರವಣಿಗೆಯಲ್ಲಿ ನೂರಾರು ಸುಮಂಗಲೆಯರು ಕುಂಭಮೇಳದೊಂದಿಗೆ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ. ಜಡೆಯ ಶಾಂತಲಿಂಗ ಸ್ವಾಮಿಜಿ, ಮುದಗಲ್ಲದ ಮಹಾಂತ ಸ್ವಾಮೀಜಿ ರವಿಕುಮಾರ ಸಂಗೀತ ಪ್ರಸ್ತುತ ಪಡಿಸಿದರು. ಮಸೂತಿಯ ಪ್ರಭುಕುಮಾರ ಶಿವಾಚಾರ್ಯ ಸ್ವಾಮೀಜಿ, ಗುಳೇದಗುಡ್ಡದ ಕಾಶಿನಾಥ ಸ್ವಾಮೀಜಿ, ಶೆಟ್ಟರಮಠದ ಮರುಳಸಿದ್ದ ಸ್ವಾಮೀಜಿ, ಬಿ.ಎಲ್.ಪಾಟೀಲ, ಶಂಕ್ರಯ್ಯ ಗುರುಮಠ, ಬಸವರಾಜ ಹೊನ್ನಿಗನೂರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಕನ್ನಡ ಸಾಹಿತ್ಯ ಲೋಕಕ್ಕೆ ಕುವೆಂಪು ಅವರ ಕೊಡುಗೆ ಅಪಾರ

**ಅಥಣಿ :** ರಾಷ್ಟ್ರಕವಿ ಕುವೆಂಪು ಅವರು ಕನ್ನಡ ನಾಡಿನ ಸಾಹಿತ್ಯ ಲೋಕಕ್ಕೆ ನೀಡಿದ ಕೊಡುಗೆ ಅಪಾರವಾದದ್ದು. ಕನ್ನಡ ನಾಡಿಗೆ ಮೊದಲ ಜ್ಞಾನಪೀಠ ಪ್ರಶಸ್ತಿ ತಂದು ಕೊಟ್ಟಿರುವ ಕೀರ್ತಿ ಇವರಿಗೆ ಸಲ್ಲುತ್ತದೆ. ಅವರು ನೀಡಿದ ವಿಶ್ವ ಮಾನವ ಸಂದೇಶವನ್ನು ಪ್ರತಿಯೊಬ್ಬರೂ ಪಾಲಿಸುವುದು ಇಂದಿನ ಅಗತ್ಯವಾಗಿದೆ ಎಂದು ಕರವೇ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಣ್ಣಾಸಾಹೇಬ ತೆಲಸಂಗ ಹೇಳಿದರು.

ಅವರು ಪಟ್ಟಣದಲ್ಲಿ ಎಚ್ ಶಿವರಾಮೇಗೌಡರ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಾಲಯದಲ್ಲಿ ರಾಷ್ಟ್ರಕವಿ ಕುವೆಂಪು ಅವರ 120 ನೇ ಜನ್ಮ ದಿನಾಚರಣೆಯ ಕಾರ್ಯಕ್ರಮದಲ್ಲಿ ಭಾವಚಿತ್ರಕ್ಕೆ ಪೂಜಿ ಸಲ್ಲಿಸಿ ಮಾತನಾಡಿದರು. ಮನುಜಮತ ವಿಶ್ವಪಥ ಎಂಬ ಸಂದೇಶವನ್ನು ತಮ್ಮ ಸಾಹಿತ್ಯದ ಮೂಲಕ ನೀಡಿರುವ ಕುವೆಂಪು ಅವರು ಸಾಹಿತ್ಯ ಲೋಕಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಅವರು ರಚಿಸಿರುವ ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ ನಾಡಗೀತೆಯಾದರೆ ಉಳುವ ಯೋಗಿಯ ನೋಡಲ್ಲಿ ಎಂಬ ರೈತ ಗೀತೆ ಎಂದಿಗೂ ಮರೆಯಲು ಸಾಧ್ಯವಿಲ್ಲ. ನಮ್ಮ ಕರ್ನಾಟಕ ರಕ್ಷಣಾ ವೇದಿಕೆಯ ಲಾಂಛನದ ಜೊತೆಗೆ ಸಮಾನ ಸ್ಥಾನದಲ್ಲಿ ಅವರ ಕುವೆಂಪು ಅವರ ಭಾವಚಿತ್ರ ಅಳವಡಿಸುವ ಮೂಲಕ ಗೌರವಿಸಲಾಗಿದೆ. ಅವರ ಜನ್ಮದಿನಾಚರಣೆಯನ್ನು ವಿಶ್ವಮಾನವ ದಿನಾಚರಣೆಯನ್ನಾಗಿ ಆಚರಿಸುವ ಮೂಲಕ ಅವರನ್ನು ಸ್ಮರಿಸುವುದು ನಮ್ಮೆಲ್ಲರಿಗೆ ಹೆಮ್ಮೆ. ಅವರು ಹೆಸರಿನಿಂದ ಪುಟ್ಟಪ್ಪ ಎನಿಸಿಕೊಂಡರು ಕನ್ನಡ ನಾಡಿಗೆ ದೊಡ್ಡಪ್ಪ ಎನಿಸಿಕೊಂಡಿದ್ದಾರೆ. ಅವರು ಆಂಗ್ಲ ಮಾಧ್ಯಮ ಶಾಲೆಯಲ್ಲಿ ಓದಿದರೂ ಕೂಡ ಕನ್ನಡ ನಾಡು, ನುಡಿ, ಮತ್ತು ಸಂಸ್ಕೃತಿಯ ಬಗ್ಗೆ ಅಪಾರ ಪ್ರಿ?ತಿ ಮತ್ತು ಅಭಿಮಾನ ಬೆಳೆಸಿಕೊಂಡಿದ್ದರು. ಅವರು ನಾಡು ನುಡಿಯ ಬಗ್ಗೆ ರಚಿಸಿದ ಗೀತೆಗಳು ಅವರಲ್ಲಿದ್ದ ಕನ್ನಡ ಪ್ರೆ?ಮ ಎಷ್ಟು ಎಂಬುದನ್ನು ಸಾರುತ್ತಿವೆ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸಾಹಿತಿ ಡಾ. ಆರ್ ಎಸ್ ದೊಡ್ಡನಿಂಗಪ್ಪಗೋಳ ಮಾತನಾಡಿ ವಿಶ್ವದಲ್ಲಿ ಶಾಂತಿಯಿಂದ ನೆಲಿಸಬೇಕಾದರೆ ಕುವೆಂಪು ಅವರ ವಿಶ್ವಮಾನವ ಸಂದೇಶವನ್ನು ಜಗತ್ತಿಗೆ ಸಾರುವ ಜೊತೆಗೆ ಪ್ರತಿಯೊಬ್ಬರೂ ಪಾಲನೆ ಮಾಡಬೇಕಾದ ಅಗತ್ಯವಿದೆ. ಅವರು ನೀಡಿರುವ ಸಂದೇಶವನ್ನು ಅರ್ಥ ಮಾಡಿಕೊಂಡು ನಮ್ಮ ಜನಪ್ರತಿನಿಧಿಗಳು ಅನುಷ್ಠಾನಗೊಳಿಸಿದರೆ ನಮ್ಮ ನಾಡು ನಮ್ಮ ದೇಶ ಸರ್ವಜನಾಂಗದ ಶಾಂತಿಯ ತೋಟವಾಗುತ್ತದೆ.

ಪ್ರಸ್ತುತ ಒಂದು ಧರ್ಮ, ಜಾತಿ ಹೆಸರಿನಲ್ಲಿ ನಡೆಯುತ್ತಿರುವ ಬೆಳವಣಿಗೆಗಳು ಆತಂಕಕಾರಿಯಾಗಿವೆ. ಇಂತಹ ಆತಂಕಗಳು ದೂರವಾಗಿ ಜಾತಿ, ಧರ್ಮಗಳ ಗೊಡವೆ ಇಲ್ಲದೇ ಬದುಕು ಸಾಗಿಸಬೇಕು ಎಂಬುದೇ ಕುವೆಂಪು ಅವರ ಆಶಯವಾಗಿತ್ತು. ಅವರ ಜನ್ಮ ದಿನಾಚರಣೆಯನ್ನು ನಾವೆಲ್ಲರೂ ಆಚರಿಸುವ ಮೂಲಕ ಅವರು ನೀಡಿರುವ ವಿಶ್ವಮಾನವ ಸಂದೇಶ ಸಮಾಜದಲ್ಲಿ ಶಾಂತಿ ಸುವ್ಯವಸ್ಥೆ ನೆಲೆಸುವಂತೆ ಪ್ರತಿಯೊಬ್ಬರೂ ಅನುಸರಿಸುವುದು ಅಗತ್ಯವಾಗಿದೆ ಎಂದು ಹೇಳಿದರು.

ಕರವೇ ತಾಲೂಕ ಘಟಕದ ಅಧ್ಯಕ್ಷ ಉದಯ ಮಾಕಾಣಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಇದೇ ಸಂದರ್ಭದಲ್ಲಿ ಇತ್ತೀಚಿಗೆ ಜರುಗಿದ ಗಡಿನಾಡು ಕನ್ನಡ ಉತ್ಸವ ಕಾರ್ಯಕ್ರಮಕ್ಕೆ ಸಹಾಯ ಸಹಕಾರ ನೀಡಿದ ಕನ್ನಡ ಸೇವಕರಿಗೆ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಜಗನ್ನಾಥ ಬಾಮನೆ, ಅನಿಲ ಪಾಟೀಲ, ಕುಮಾರ ಬಡಿಗೇರ, ಸಿದ್ದು ಹಂಡಗಿ, ಶೋಭಾ ಮಾಳಿ, ವಿಜಯ ನೇಮಗೌಡ, ರಾಜು ತಂಗಡಿ, ಸತೀಶ ಯಲ್ಲಟ್ಟಿ, ರಾಜು ವಾಘಮಾರೆ, ಪರಶುರಾಮ ಕಾಂಬಳೆ, ಅನಿಲ ಒಡೆಯರ, ಹಣಮವ್ವ ದಂಡಗಿ, ಸುಕುಮಾರ ಮಾದರ, ಬಾಲಕೃಷ್ಣ ಗುಡದೆ, ಅನಿಲ ಭಜಂತ್ರಿ, ಮಲ್ಲು ನಡುವಿನಕೇರಿ, ಮುತ್ತುರಾಜ ಗೊಲ್ಲರ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ಲಕ್ಷ್ಮೀ ಹೆಬ್ಬಾಳಕರ್ V/S ಸಿ.ಟಿ.ರವಿ ಪ್ರಕರಣ: ಸರಕಾರ ಮತ್ತು ಬಿಜೆಪಿ ಇಬ್ಬರ ನಡೆಯೂ ಸಮರ್ಥನೀಯವಲ್ಲ ಒಳಗಿನ ಘಟನೆಯಿಂದ ರಕ್ಷಣೆ ಪಡೆಯಲು ಹೊರಗಿನ ಬೆಳವಣಿಗೆಯ ಆಶ್ರಯ ಪಡೆಯುವುದು ಸರಿಯಲ್ಲ

**ಬೆಳಗಾವಿ:** 2024ರಲ್ಲಿರಾಜ್ಯದಲ್ಲಿನಡೆದಘಟನೆಗಳನ್ನು ಅವಲೋಕಿಸಿದಾಗ ಬೆಳಗಾವಿಯ ಚಳಿಗಾಲದ ಅಧಿವೇಶನದ ಅಂತಿಮ ದಿನ ನಡೆದ ಕಹಿ ಘಟನೆ ಮೊದಲ ಸಾಲಿನಲ್ಲೇ ನಿಲ್ಲುತ್ತದೆ.

ಹಿರಿಯರಮನೆ,ಪ್ರಭುದ್ಧರಮನೆಎಂದುಕರೆಸಿಕೊಳ್ಳುವ ವಿಧಾನ ಪರಿಷತ್ತಿನಲ್ಲಿ ಇತಿಹಾಸದಲ್ಲೇ ಕಾಣದಂತಹ, ಕೇಳದಂತಹ ಕಪ್ಪು ಚುಕ್ಕೆ ದಾಖಲಾಗಿದೆ.

ಇವರು ನಮ್ಮ ಪ್ರತಿನಿಧಿಗಳಾ ಎಂದು ಜನರು ತಲೆ ತಗ್ಗಿಸುವಂತಹ ಘಟನೆಗೆ ವಿಧಾನ ಪರಿಷತ್ತು ಸಾಕ್ಷಿಯಾಯಿತು. ವಿಪರ್ಯಾಸವೆಂದರೆ ಅಂದು ವಿಧಾನ ಪರಿಷತ್ತಿನ ಒಳಗೆ ನಡೆದ ಘಟನೆಯನ್ನು ಮರೆ ಮಾಚುವುದಕ್ಕೊಸ್ಕರ ಅದೇ ದಿನ ಹೊರಗಡೆ ನಡೆದ ಘಟನೆಗಳನ್ನು ವಿಜ್ರಂಭಿಸಲಾಗುತ್ತಿದೆ. ಹೊರಗಿನ ಬೆಳವಣಿಗೆಗಳನ್ನೇ ದೊಡ್ಡದು ಮಾಡುವ ಮೂಲಕ ಒಳಗೆ ನಡೆದ ಘನಘೋರ ಘಟನೆಯನ್ನು ಮುಚ್ಚಿ ಹಾಕಲು ಪ್ರಯತ್ನಿಸುತ್ತಿರುವುದನ್ನು ಇಡೀ ಸಮಾಜ ಕಣ್ಣರಳಿಸಿ ನೋಡುತ್ತಿದೆ.

ಈ ಇಡೀ ಘಟನೆ ಮತ್ತು ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ ನೋಡಿದರೆ, ಸದನದ ಒಳಗಿನ ಘಟನೆ ಮತ್ತು ಹೊರಗಿನ ಬೆಳವಣಿಗೆ ಎರಡನ್ನೂ ಪ್ರತ್ಯೇಕಿಸಿ ನೋಡಬೇಕು, ಪ್ರತ್ಯೇಕವಾಗಿಯೇ ತನಿಖೆಗೆ ಒಳಪಡಿಸಬೇಕು. ಹೊರಗಿನ ಬೆಳವಣಿಗೆ ಮೂಲಕ ಒಳಗಿನ ಘಟನೆಗೆ ರಕ್ಷಣೆ ಪಡೆಯಲು ಯತ್ನಿಸುವುದನ್ನು ಯಾರೂ ಒಪ್ಪಲು ಸಾಧ್ಯವಿಲ್ಲ. ಹೊರಗಿನ ಬೆಳವಣಿಗೆಯನ್ನೇ ದೊಡ್ಡದು ಮಾಡಿ ಒಳಗಿನ ಘಟನೆ ಮುಚ್ಚಿ ಹಾಕುವ ಬಿಜೆಪಿ ಪ್ರಯತ್ನ ಮತ್ತು ಎರಡೂ ಘಟನೆಗಳನ್ನು ಸೇರಿಸಿ ಸಿಐಡಿ ತನಿಖೆಗೆ ಒಳಪಡಿಸಿರುವ ಸರಕಾರದ ನಿರ್ಧಾರ ಎರಡನ್ನೂ ಪ್ರಾಜ್ಞರು ಒಪ್ಪಲು ಸಾಧ್ಯವಿಲ್ಲ. ಕೆಲವರಂತೂ ಆ ಮಾತು ಆಡಿದಾಗ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಅವರು ಅದೇ ಸ್ಥಳದಲ್ಲಿ ಕಾಲಲ್ಲಿದ್ದಿದ್ದನ್ನು ಕೈಗೆ ತೆಗೆದುಕೊಳ್ಳಬೇಕಿತ್ತು ಎಂದು ಸಾಮಾಜಿಕ ಜಾಲತಾಣಗಳಲ್ಲಿ ಆಕ್ರೋಶವ್ಯಕ್ತಪಡಿಸಿದ್ದಾರೆ.

**ಒಳಗಿನ ಘಟನೆ ಖಂಡಿಸಿ, ಹೊರಗಿನ ಬೆಳವಣಿಗೆಗೆ ಪ್ರತಿಭಟಿಸಲಿ**

ಭಾರತೀಯ ಜನತಾ ಪಾರ್ಟಿ ಆ ದಿನ ವಿಧಾನಸೌಧದ ಹೊರಗೆ ಸಿ.ಟಿ.ರವಿ ಅವರನ್ನು ನಡೆಸಿಕೊಂಡಿರುವ ರೀತಿಗೆ ತೀವ್ರ ಪ್ರತಿಭಟನೆ ನಡೆಸುತ್ತಿದೆ. ಸರಕಾರ ಮತ್ತು ಪೊಲೀಸರು ಸಿ.ಟಿ.ರವಿ ಅವರ ಬಂಧನದ ನಂತರದ ಬೆಳವಣಿಗೆಗಳನ್ನು ಸಮರ್ಥಿಸಿಕೊಳ್ಳುತ್ತಿವೆ. ಆದರೆ ಬಿಜೆಪಿ ಇದನ್ನು ಖಂಡಿಸಿ ವಿವಿಧ ರೀತಿಯಲ್ಲಿ ಹೋರಾಟ ನಡೆಸುತ್ತಿದೆ. ಈಗಾಗಲೆ ರಾಜಭವನದ ಕದವನ್ನೂ ತಟ್ಟಿದ್ದಾರೆ. ಬಿಜೆಪಿಯ ಪ್ರತಿಭಟನೆ ತಪ್ಪು ಎಂದು ಯಾರೂ ಹೇಳಲು ಸಾಧ್ಯವಿಲ್ಲ. ಬಿಜೆಪಿ ಈ ವಿಷಯದಲ್ಲಿ ಇನ್ನಷ್ಟು ಉಗ್ರ ಹೋರಾಟ ಮಾಡಲಿ, ಸರಕಾರ ನಿಷ್ಪಕ್ಷಪಾತವಾಗಿ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಿ.

ಆದರೆ, ವಿಧಾನ ಪರಿಷತ್ತಿನಲ್ಲಿ ಬಿಜೆಪಿಯ ಹಿರಿಯ ಸದಸ್ಯ, ಮಾಜಿ ಮಂತ್ರಿ, ಬಿಜೆಪಿಯ ಮಾಜಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ನಡೆದುಕೊಂಡ ರೀತಿ ಮತ್ತು ಆಡಿದ ಮಾತುಗಳನ್ನು ಬಿಜೆಪಿ ನಾಯಕರು, ಮಹಿಳಾ ಸಂಘಟನೆಗಳು, ಸಮಾಜದ ಹಿರಿಯರು ಮೊದಲು ಖಂಡಿಸಬೇಕು. ಹಾಗೆ ಮಾಡಿದಲ್ಲಿ ಪಕ್ಷದ ಕುರಿತು ಜನಸಾಮಾನ್ಯರ ಗೌರವ ಇನ್ನಷ್ಟು ಹೆಚ್ಚಲಿದೆ. ವಿಡಿಯೋಗಳಲ್ಲಿ ಅವರು ಆಡಿರುವ ಮಾತುಗಳು ದಾಖಲಾಗಿವೆ. ಖಾಸಗಿ ಚಾನೆಲ್ ಒಂದರ ಸಂದರ್ಶನದ ವೇಳೆ ಸಿ.ಟಿ.ರವಿ, 'ಅಕ್ಕಾ ನಾನು ಹೃದಯದಿಂದ ಕೆಟ್ಟವನಲ್ಲ' ಎನ್ನುವ ಮೂಲಕ ಒಳಗಡೆ ತನ್ನಿಂದ ತಪ್ಪಾಗಿದೆ ಎನ್ನುವುದನ್ನು ಪರೋಕ್ಷವಾಗಿಒಪ್ಪಿಕೊಂಡಿದ್ದಾರೆ.ಹಾಗಾಗಿ,ಸಿ.ಟಿ.ರವಿ ಕೂಡ ತಮ್ಮ ಬಾಯಿಯಿಂದ ಆ ಕ್ಷಣದಲ್ಲಿ ಬಂದಿರುವ ಪದವನ್ನು ಹಿಂದಕ್ಕೆ ಪಡೆದು, ಕ್ಷಮೆ ಕೇಳಿದರೆ ದೊಡ್ಡ ಮನುಷ್ಯರಾಗುತ್ತಾರೆ,ಅದಕ್ಕೆಈಗಲೂ ಕಾಲ ಮಿಂಚಿಲ್ಲ. ಆದರೆ ನಂತರದ ಬೆಳವಣಿಗೆಗಳನ್ನಿಟ್ಟುಕೊಂಡು ಒಳಗಡೆ ಅವಾಚ್ಯ ಶಬ್ದ ಬಳಸಿದ ಘಟನೆಯನ್ನು ಮುಚ್ಚಿಹಾಕಲು ಯಾರೂ ಅವಕಾಶ ನೀಡಬಾರದು. ಹಾಗೆ ಮಾಡಿದಲ್ಲಿ ನಮ್ಮನ್ನು ಯಾರೂ ಕ್ಷಮಿಸಲು ಸಾಧ್ಯವಿಲ್ಲ.ಹಿರಿಯರಮನೆಗೆ ಇದೊಂದು ಕರಾಳ ದಿನ, ಕಪ್ಪು ಚುಕ್ಕೆ. ಅದನ್ನು ಹಾಗೆಯೇ ಉಳಿದುಹೋಗಲು ಅವಕಾಶ ನೀಡಬಾರದು. ಒಳಗಿನ ಘಟನೆಯಿಂದ ರಕ್ಷಣೆ ಪಡೆಯಲು ಹೊರಗಿನ ಬೆಳವಣಿಗೆಯ ಆಶ್ರಯ ಪಡೆಯುವುದು ಸರಿಯಲ್ಲ.

ಬಿಜೆಪಿ ಮೊದಲಿನಿಂದಲೂ ದೇವರು, ಧರ್ಮ, ಭಾರತೀಯ ಸಂಸ್ಕೃತಿ, ಹೆಣ್ಣು ಮಕ್ಕಳ ಬಗ್ಗೆ ಗೌರವ ನೀಡುವ ಪಕ್ಷ ಎಂದು ಬಿಂಬಿಸಿಕೊಂಡೇ ಬೆಳೆದ ಪಕ್ಷ. ಅಂತಹ ಪಕ್ಷ ಈಗ ಈ ರೀತಿ ಒಬ್ಬ ಮಹಿಳೆಗೆ ತನ್ನದೇ ಪಕ್ಷದ ನಾಯಕ ಆಡಿದ ಮಾತುಗಳನ್ನು ಖಂಡಿಸದಿದ್ದರೆ, ಕೇವಲ ರಾಜಕೀಯಕ್ಕೋಸ್ಕರ ಅದನ್ನು ಬದಿಗೆ ಸರಿಸಿ, ಜನರ ದಾರಿ ತಪ್ಪಿಸಲು ಹೊರಟರೆ ಪಕ್ಷವನ್ನು ಯಾರೂ ಕ್ಷಮಿಸಲು ಸಾಧ್ಯವಿಲ್ಲ. ಎಲ್ಲೊ ನಡೆದ ಘಟನೆಗಳನ್ನಿಟ್ಟುಕೊಂಡು ಬೀದಿಗಿಳಿದು ಪ್ರತಿಭಟಿಸುವ ಬಿಜೆಪಿ ಮಹಿಳಾ ಘಟಕದವರು ಈ ಘಟನೆಯಲ್ಲಿ ಸಿ.ಟಿ.ರವಿ ಬೆನ್ನಿಗೆ ನಿಂತಿರುವುದು ವಿಪರ್ಯಾಸವೇ ಸರಿ. ಪಕ್ಷ ಯಾವುದಾದರೂ ಮಹಿಳೆ ಮಹಿಳೆಯೇ ಎನ್ನುವುದನ್ನು ಮರೆತಂತೆ ವರ್ತಿಸುವುದು ಸರಿಯಲ್ಲ.

**ಸರಕಾರದ ನಡೆಯೂ ಸರಿಯಲ್ಲ**

ಈ ಪ್ರಕರಣದ ಕುರಿತಂತೆ ಸರಕಾರದ ನಡೆಯೂ ಸರಿಯೆನಿಸುವುದಿಲ್ಲ.ಒಳಗಿನಘಟನೆಮತ್ತುಹೊರಗಿನ ಬೆಳವಣಿಗೆ ಎರಡೂ ಒಂದಕ್ಕೊಂದು ಸಂಬಂಧ ಹೊಂದಿದ್ದರೂ ಎರಡನ್ನೂ ಪ್ರತ್ಯೇಕವಾಗಿಯೇ ತನಿಖೆ ನಡೆಸಬೇಕಿದೆ. ಒಂದಕ್ಕೊಂದು ತಾಳೆ ಹಚ್ಚಿ ನೋಡುವುದಕ್ಕೆ ಇದರಲ್ಲಿ ಅವಕಾಶವನ್ನೇ ನೀಡಬಾರದು. ಮಹಿಳೆಯ ಬಗ್ಗೆ, ಅದರಲ್ಲಿ ಸಚಿವೆಯೊಬ್ಬರ ಬಗ್ಗೆ ಅಂತಹ ಶಬ್ದ ಬಳಸಿದ್ದನ್ನು ಬೇರೆ ಯಾವುದೇ ಬೆಳವಣಿಗೆಗಳೊಂದಿಗೆ ಸಮ್ಮಿಳಿತಗೊಳಿಸದೆ, ಅದಷ್ಟನ್ನೇ ಪ್ರತ್ಯೇಕವಾಗಿ ತನಿಖೆಗೆ ಒಳಪಡಿಸಬೇಕು. ಬೇರೆಲ್ಲ ಬೆಳವಣಿಗೆಗಳನ್ನು ಪ್ರತ್ಯೇಕವಾಗಿಯೇ ತನಿಖೆ ನಡೆಬೇಕು. ಆಯಾ ಪ್ರಕರಣಕ್ಕೆ ಸಂಬಂಧಿಸಿದಂತೆ ತಪ್ಪಿತಸ್ಥರು ಶಿಕ್ಷೆ ಅನುಭವಿಸುವಂತಾಗಬೇಕು. ಹೊರಗಿನ ಬೆಳವಣಿಗೆಗಳನ್ನು ಒಳಗಿನ ಘಟನೆಯೊಂದಿಗೆ ಸೇರಿಸಿ ತನಿಖೆ ನಡೆಸಿದಲ್ಲಿ ಅದು ಎಲ್ಲೊ ದಾರಿ ತಪ್ಪುವ ಆತಂಕವಿದೆ. ಪ್ರತ್ಯೇಕ ಸಂಸ್ಥೆಯಿಂದ ಅಥವಾ ಪ್ರತ್ಯೇಕ ತಂಡದಿಂದ ಎರಡೂ ಘಟನೆಗಳನ್ನು ತನಿಖೆಗೊಳಪಡಿಸಬೇಕು. ಈ ಬಗ್ಗೆ ಸಮಾಜ ಧ್ವನಿ ಎತ್ತಬೇಕು. ಮಹಿಳಾ ಸಂಘಟನೆಗಳು ಪಕ್ಷಾತೀತವಾಗಿ, ಜಾತ್ಯತೀತವಾಗಿ ಎದ್ದು ನಿಲ್ಲಬೇಕು. ಇಲ್ಲವಾದಲ್ಲಿ ಸತ್ಯ ಅಡಗಿ ಸುಳ್ಳು ವಿಜ್ರಂಭಿಸುವ ಅಪಾಯವಿದೆ. ಅದಕ್ಕೆ ಅವಕಾಶ ನೀಡದಿರುವುದು ಎಲ್ಲರ ಜವಾಬ್ದಾರಿ.

# ವಿಶೇಷ ಪ್ರೋತ್ಸಾಹ ಧನಕ್ಕೆ ಅರ್ಜಿ ಅವಧಿ ವಿಸ್ತರಣೆ

**ವಿಜಯಪುರ :** 2024–25ನೇ ಸಾಲಿನಲ್ಲಿ ಬಿ.ಎಡ್ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹ ಧನಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ವಿದ್ಯಾರ್ಥಿಗಳು ಅರ್ಜಿಯನ್ನು ಸಲ್ಲಿಸಲು ದಿನಾಂಕ: 06–01–2024 ರವರೆಗೆ ಅವಧಿಗೆ ವಿಸ್ತರಿಸಲಾಗಿದೆ.

National council for Teacher Education ಇಲ್ಲಿಯ ಮಾನ್ಯತೆ ಪಡೆದಿರುವ ಬಿ. ಎಡ್ ಸರ್ಕಾರಿ ಅರೆ ಸರ್ಕಾರಿ /ಖಾಸಗಿ ಕಾಲೇಜುಗಳಲಿ 2024–25ನೇ ಸಾಲಿಗೆ ಪ್ರವೇಶ ಪಡೆದು ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತ ಸಮುದಾಯದ ಮುಸ್ಲಿಂ, ಕ್ರೀಸಿಯನ್, ಜೈನ್, ಸಿಖ್, ಬೌದ್ದ, ಹಾಗೂ ಪಾರ್ಸಿ ವಿದ್ಯಾರ್ಥಿಗಳಿಗೆ ರೂ 25.000/ ಗಳ ವಿಶೇಷ ಪ್ರೋತ್ಸಾಹಧನ ಪ್ರತಿ ವರ್ಷ (ಗರಿಷ್ಟ ಎರಡು ವರ್ಷಕ್ಕೆ ಮಾತ್ರ) ನೀಡಲಾಗುವುದು. ವಿದ್ಯಾರ್ಥಿಗಳು ಸೇವಾ ಸಿಂದುವಿನ ಪೋರ್ಟಲ್ ನಲ್ಲಿ (https://sevasindhu.karnataka.gov.in) ವೆಬ್ ಸೈಟ್ ಮೂಲಕ ಅಗತ್ಯ ದಾಖಲಾತಿ ಯೋಂದಿಗೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಲ್ಪ ದಂಖ್ಯಾತ ಕಛೇರಿ (08352295523) ಹಾಗೂ ತಾಲೂಕು ಅಲ್ಪ ಸಂಖ್ಯಾತರ ಮಾಹಿತಿ ಕೇಂದ್ರಗಳಾದ ವಿಜಯಪುರ (8123710766) ಬಸವನ ಬಾಗೇವಾಡಿಯ (9972340721) ಮುದ್ದೇಬಿಹಾಳ (8722445552) ಇಂಡಿ (9900109759) ಹಾಗೂ ಸಿಂದಗಿ (9035558609) ಸಂಪರ್ಕಿಸಬಹುದಾಗಿ ಎಂದು ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿಗಳು ಪ್ರಕಟಣೆ ತಿಳಿಸಿದೆ.

# ಅಪೂರ್ಣ ಅರ್ಜಿ ಪುನಃ ಭರ್ತಿಗೆ ಅವಕಾಶ

**ಮುಧೋಳ :** ಶಿಶು ಅಭಿವೃದ್ಧಿ ಯೋಜನೆಯ ವ್ಯಾಪ್ತಿಯಲ್ಲಿ ಖಾಲಿಯಿರುವ ಒಟ್ಟು 22 ಅಂಗನವಾಡಿ ಕಾರ್ಯಕರ್ತೆಯರ ಹಾಗೂ 95 ಅಂಗನವಾಡಿ ಸಹಾಯಕಿಯರ ಗೌರವಸೇವೆ ಹುದ್ದೆಗಳಿಗೆ ದಿನಾಂಕ: 15–10–2024 ರಂದು ಅನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು.

ಸದರಿ ಅಂಗನವಾಡಿ ಕಾರ್ಯಕರ್ತೆಯರ ಹುದ್ದೆಗಳಿಗೆ 200 ಅರ್ಜಿಗಳು ಹಾಗೂ ಸಹಾಯಕಿಯರ ಹುದ್ದೆಗೆ 254 ಸಲ್ಲಿಕೆಯಾಗಿರುವ ಅರ್ಜಿಗಳು 4 ಹಂತಗಳನ್ನು ಪೂರ್ಣಗೊಳಿಸದೇ ಅಪೂರ್ಣಗೊಂಡಿರುತ್ತವೆ. ಸದರಿ ಅಪೂರ್ಣಗೊಂಡಿರುವ ಅರ್ಜಿಗಳನ್ನು ಪೂರ್ಣಗೊಳಿಸಲು ಆನಲೈನ್ ನಲ್ಲಿ ದಿನಾಂಕ: 26–12–2024 ರಿಂದ 05–01–2025 ರವರೆಗೆ ಕಾಲಾವಕಾಶವನ್ನು ಕಲ್ಪಿಸಲಾಗಿದೆ. ಆದ್ದರಿಂದ ಸಾರ್ವಜನಿಕರ ಮಾಹಿತಿಗಾಗಿ ಸಲ್ಲಿಸಿದೆ.

ಮತ್ತು ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಮುಧೋಳ ಇವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಶಿಶು ಅಭಿವೃದ್ಧಿ ಅಧಿಕಾರಿಳಾದ ಶ್ರೀಮತಿ ಕಾಶಿಬಾಯಿ ಕೊರೆಗೊಳ ಮುಧೋಳ ರವರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

# ವಿಕಲಚೇತನರ ರಿಯಾಯಿತಿ ಪಾಸ್ ನವಿಕರಣ

**ಬಾಗಲಕೋಟೆ :** ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು ಪ್ರತಿವರ್ಷದಂತೆ ಈ ಬಾರಿಯ 2025 ಸಾಲಿನ ವಿಕಲಚೇತನರ ರಿಯಾಯಿತಿ ಬಸ್ ಪಾಸುಗಳನ್ನು ನವೀಕರಿಸಲು ಸೂಕ್ತ ವ್ಯವಸ್ಥೆ ಮಾಡಲಾಗಿರುತ್ತದೆ. 2024 ನೇ ಸಾಲಿನಲ್ಲಿ ಪಾಸು ಹೊಂದಿರುವ ವಿಕಲಚೇತನರ ರಿಯಾಯಿತಿ ದರದ ಪಾಸುಗಳನ್ನು ವಿಭಾಗದ ಎಲ್ಲಾ ಘಟಕಗಳ ಕೌಂಟ–ರ್ ಗಳಲ್ಲಿ ಫೆಬ್ರವರಿ–2025ರ ಅಂತ್ಯದವರೆಗೂ ನವಿಕರಿಸಲಾಗುತ್ತಿದೆ. ಫಲಾನುಭವಿಗಳು ದಿನಾಂಕ:01–01–2025 ರಿಂದ 28–02–2025 ರ ಒಳಗಾಗಿ ರೂ:660/– ನಗದು ರೂಪದಲ್ಲಿ ಪಾವತಿಸಿ ವಿಕಲಚೇತನರ ಬಸ್ ಪಾಸ್ ನವಿಕರಿ ಕೊಳ್ಳುವದು 2024 ರಲ್ಲಿ ನೀಡಿದ ಬಸ್ ಪಾಸುಗಳು 31–12–2024 ರ ವರೆಗೆ ಮಾನ್ಯತೆಯಿದ್ದು ಅವುಗಳನ್ನು ದಿನಾಂಕ:28–02–2025 ರವರೆಗೆ ಮಾನ್ಯಾತೆ ಮಾಡಲಾಗಿದೆ ಸದರಿ ಅವದಿ ಒಳಗಾಗಿ ಎಲ್ಲಾ ಫಲಾನುಭವಿಗಳು ತಮ್ಮ ಪಾಸುಗಳನ್ನು ನವೀಕರಿಸಿಕೊಳ್ಳಲು ಅಗತ್ಯ ಧಾಖಲೆಗಳನ್ನು ಪಡೆದು ಪಾಸ್ ವಿತರಿಸಲಾಗುವದು. ನೂತನ ಪಾಸ್ ವಿತರಣೆಗೆ ನಿರ್ದಿಷ್ಟ ಕಾಲಮಿತಿ ಇಲ್ಲಾ . ಸೇವಾ ಸಿಂದು ಪೋರ್ಟಲ್ ನಲ್ಲಿ ಧಾಖಲಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಕೇಂದ್ರ ಕಚೇರಿ ಸಂಸ್ಥೆ ಕೋರಲಾಗಿದೆ. ಅದರಂತೆ 2025 ನೇ ಸಾಲಿನಲ್ಲಿ ಅರ್ಹ ವಿಕಲಚೇತನರಿಗೆ ಹೊಸದಾಗಿ ಪಾಸುಗಳನ್ನು ಪೂರೈಸಲು ಸಹ ಸೂಕ್ತ ವ್ಯವಸ್ಥೆ ಮಾಡಲಾಗಿರುತ್ತದೆ ರಿಯಾಯಿತಿ ಬಸ್ ಪಾಸುಗಳನ್ನು ಪಡೆದುಕೊಳ್ಳಲು UNIQUE DISABILITY, DISABILITY CERTEFICATE, ಆಧಾರ ಕಾರ್ಡ್ ಹಾಗೂ ಇತ್ತಿಚಿನ ಮೂರು ಭಾವಚಿತ್ರಗಳೊಂದಿಗೆ ವಿಭಾಗಿಯ ಕಚೇರಿ ವಾಕರಸಾಸಂಸ್ಥೆ ನವನಗರ ಬಾಗಲಕೋಟದಲ್ಲಿ ಪ್ರತಿ ಮಂಗಳವಾರ ಮತ್ತು ಶುಕ್ರವಾರಗಳಂದು ಅರ್ಜಿ ಸಲ್ಲಿಸಿ ರಿಯಾಯಿತಿ ದರದ ಬಸ್ ಪಾಸ್ ಪಡೆದುಕೊಳ್ಳಬಹುದಾಗಿದೆ. ವಿಕಲಚೇತನರು ಈ ಸೌಲಭ್ಯದ ಸದುಪಯೋಗವನ್ನು ಪಡೆದುಕೊಳ್ಳು ಕೋರಲಾಗಿದೆ.

# ನೇತ್ರಾಧಿಕಾರಿಗಳ ದಿನ ಆಚರಣೆ



**ಬಾಗಲಕೋಟೆ :** ದಿ 3 ರಂದು ನಗರದ ಬನಶಂಕರಿ ಕಣ್ಣಿನ ಆಸ್ಪತ್ರೆಯಲ್ಲಿ ನೇತ್ರಾಧಿಕಾರಿಗಳ ದಿನಾಚರಣೆ ಆಚರಿಸಲಾಯಿತು. ನೇತ್ರಾಧಿಕಾರಿಗಳ ದಿನಾಚರಣೆ ನಿಮಿತ್ಯವಾಗಿ ಜಿಲ್ಲೆಯ ಎಲ್ಲ ನೇತ್ರಾಧಿಕಾರಿಗಳಿಗೆ ಸನ್ಮಾನಿಸಲಾಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬನಶಂಕರಿ ಕಣ್ಣಿನ ಆಸ್ಪತ್ರೆಯ ಮುಖ್ಯಾಸ್ಥರಾದ ಡಾ॥ ಗಿರೀಶ ಮಸುರಕರ ವಹಿಸಿದ್ದರು. ಮುಖ್ಯಅತಿಥಿ–ಯಾಗಿ ಬಾಗಲಕೋಟ ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ॥ ಮಂಜುನಾಥ ಹಾಗೂ ಅತಿಥಿಗಳಾಗಿ ಶ್ರೀಮತಿ ಸಂಧ್ಯಾ ಮಸುರಕರ, ಡಾ॥ ಶ್ರವಣ ಮಸುರಕರ, ಡಾ॥ ಉಲ್ಕಾ ಮಸುರಕರ ಭಾಗವಹಿಸಿದ್ದರು. ನೇತ್ರಾಧಿಕಾರಿಗಳ ಸಂಘದ ಜಿಲ್ಲಾಧ್ಯಕ್ಷ ಎನ್.ಎಚ್. ಕಿತ್ತಲಿ, ಉಪಾಧ್ಯಕ್ಷೆ ಶ್ರೀಮತಿ ವನಜಾಕ್ಷಿ ಬಿದರಿ ಭಾಗವಹಿಸಿದ್ದರು. ಸೂಳಿಭಾವಿಯ ಪ್ರಾಥಮಿಕ ಆರೋಗ್ಯ ಕೇಂದ್ರದ ನೇತ್ರಾಧಿಕಾರಿ ಬಿ.ವಿ. ತೊರಗಲ್ಲ ನೇತೃತ್ವದಲ್ಲಿ ಕಾರ್ಯಕ್ರಮ ಜರುಗಿತು. ಈ ಕಾರ್ಯಕ್ರಮದಲ್ಲಿ ಜಿಲ್ಲೆಯ ಎಲ್ಲ ನೇತ್ರಾಧಿಕಾರಿಗಳು, ಆಸ್ಪತ್ರೆಯ ಸಿಬ್ಬಂದಿಗಳು, ಆರ್ಯಭಟ್ ಪ್ಯಾರಾ ಮೆಡಿಕಲ್ ಕಾಲೇಜು ಮತ್ತು ಅರುಣೋದಯ ಪ್ಯಾರಾ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಚ್.ಪಿ. ನಾಯಕ ನಿರೂಪಿಸಿದರು. ನೇತ್ರಾಧಿಕಾರಿ ಎಸ್.ಎಸ್. ಕಮತಗಿ ವಂದಿಸಿದರು.

# ಕಲಾಭಾರತಿ ಕಲಾ ಸಂಘದ ಅಧ್ಯಕ್ಷರಿಂದ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಆಯ್ಕೆ ಯಾದ ನೂತನ ಸದಸ್ಯರಿಗೆ ಗೌರವ ಸತ್ಕಾರ




**ಕೂಡ್ಲಿಗಿ:** ತಾಲೂಕು ಹಿರೇಹೆಗ್ಡಾಳ್ ಗ್ರಾಮದಲ್ಲಿ ನೂತನ ಕೃಷಿ ಪತ್ತಿನ ಸಹಕಾರ ಸಂಘ ಅಧ್ಯಕ್ಷರು ಉಪಾಧ್ಯಕ್ಷರು ನಿರ್ದೇಶಕರು ಹಾಗೂ ನಾಮ ನಿರ್ದೇಶಕ ಇವರಿಗೆ ಕಲಾಭಾರತಿ ಕಲಾ ಸಂಘದ ವತಿಯಿಂದ ಸನ್ಮಾನ ಕಾರ್ಯಕ್ರಮ ಈ ಸಂದರ್ಭದಲ್ಲಿ ಕಲಾಭಾರತಿ ಕಲಾ ಸಂಘದ ಅಧ್ಯಕ್ಷರು ಹಾಗೂ ಸಂಸ್ಥಾಪಕರು ಬಣಕಾರ್ ಮೂಗಪ್ಪ ಮಾತನಾಡಿ ಹೊಸ ವರ್ಷದ ಹಾರ್ದಿಕ ಶುಭಾಶಯಗಳು ಕೋರಿದ ಹಾಗೂ ಸರ್ವ ಸದಸ್ಯರಿಗೆ ಅಭಿನಂದನೆ ಸಲ್ಲಿಸಿದ್ದಾರೆ ಈ ಒಂದು ನಮ್ಮ ಕಲಾ ಭಾರತಿ ಕಲಸಂಘದ ವತಿಯಿಂದ ಸಾಕಷ್ಟು ಸಾಧಕರನ್ನ ಗುರುತಿಸಿ ಸನ್ಮಾನ ಮಾಡುವ ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದೆ ಅಭೂತಪೂರ್ವದ ಕಾರ್ಯಕ್ರಮಗಳನ್ನು ನಿರ್ವಹಿಸುತ್ತದೆ ಎಂದು ತಿಳಿಸಿದರು ಈ ಸಂದರ್ಭದಲ್ಲಿ ಬುಳ್ಳಿ ಪತ್ರಪ್ಪ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಮಾತನಾಡಿದವರು ನಮ್ಮ ಊರಿನ ಹಿರಿಮೆ ಕಲಾಭಾರತಿ ಕಲಾಸಂಘ ಸಾಕಷ್ಟು ಸಾಮಾಜಿಕ ಕಳಕಳಿಯಲ್ಲಿ ಮುಂದುವರಿದಿದ್ದು ದೊಡ್ಡ ದೊಡ್ಡ ಕಾರ್ಯಕ್ರಮಗಳನ್ನು ಆಯೋಜನೆ ಮಾಡುವುದು ಸುಲಭದ ಮಾತಲ್ಲ ಇಂಥ ಸಂಘವು ನಮ್ಮ ಊರಿನಲ್ಲಿ ಬೆಳೆದಿರುವುದು ಅವಳಿ ಶ್ರೀಗಳ ತುಲಾಭಾರ 31 ಆದರ್ಶ ದಂಪತಿಗಳಿಗೆ ಅವಾರ್ಡ್ ದಿನಾಂಕ 23 12 2024 ರಂದು ನಮ್ಮ ಊರಿನಲ್ಲಿ ಜರುಗಿತು ಸಾಕಷ್ಟು ಸಿನಿಮಾ ನಟರು ಕಿರುತೆರೆ ನಟ–ರು ಪ್ರಶಸ್ತಿಯನ್ನು ತೆಗೆದುಕೊಂಡು ಹೋಗಿದ್ದಾರೆ ಇನ್ನು ಹೆಚ್ಚಿನ ರಾಜ್ಯಮಟ್ಟದಲ್ಲಿ ಅಂತರಾಜ್ಯ ಮಟ್ಟದಲ್ಲಿ ಬೆಳೆಯಲಿ ಈ ಸಂಘ ಎಂದು ಹಾರೈಸಿದರು ಯುಜಿ ರವೀಂದ್ರ ಮಾತನಾಡಿ ನಮ್ಮ ಊರಿನ ಕಲಾ ಭಾರತಿ ಕಲಾಸಂಘ ಮೂಲೆ ಮೂಲೆಗೆ ಸಾಧಕರನ್ನು ಗುರುತಿಸಿ ಕೊಡಮಾಡುವ ಸಾಧಕರನ್ನು ಗುರುತಿಸಿ ನೀಡುವ ಪ್ರಶಸ್ತಿಯನ್ನು ಗೌರವಿತವಾಗಿ ನೀಡುತ್ತಾ ಬಂದಿದೆ ನಮ್ಮ ಕೃಷಿ ಪತ್ತಿನ ಸಹಕಾರದಿಂದ ಅವರಿಗೆ ಅಭಿನಂದನೆ ಹಾಗೆ ಹೊಸದಾಗಿ ಆಯ್ಕೆಯಾದ ಕೃಷಿ ಪತ್ತಿನ ಸಹಕಾರ ಸಂಘದ ಎಲ್ಲಾ ಸರ್ವರಿಗೂ ಈ ಸಂಘದಿಂದ ಸನ್ಮಾನಿಸಲಾಯಿತು ಹೀಗೆ ಇವರ ಸೇವೆ ಮುಂದುವರೆಯಲೆಂದು ಹಾರೈಸಿದರು ಈ ಸಂದರ್ಭದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಅಧ್ಯಕ್ಷರಾದಬುಳ್ಳಿಪತ್ರೇಪ್ಪತಳವಾರಮೂಗಪ್ಪ ಕೆ ಎಮ್ ಬಸಯ್ಯ ಸಿಎಂ ಕೊಟ್ರಯ್ಯ ಟಿ ವೀರಣ್ಣ ಚಲವಾದಿ ಕೊಟ್ರಪ್ಪ ನಾಗರಾಜ ಜೆಎಂ ಬಿ ವಾಮೇಶ ಎನ್ ಮೇಘರಾಜ್ ಬಣಕಾರ ಯಶೋದಮ್ಮ ಜಿ ಆರ್ ನಾಗವೇಣಿ ಬತನಹಳ್ಳಿ ಕೊಟ್ರೇಶ್ ಸಿಇಒ ಎಸ್ ಎಸ್ ರಾಜೇಶ್ ನಾಮನಿ ನಿರ್ದೇಶಕರು ಜೆಎಸ್ ಹಳ್ಳಿ ಜಂಬಣ್ಣ ಸಿಎಂ ಪಂಚಾಕ್ಷರಯ್ಯ ರೈತ ಮುಖಂಡರು ಜಯಣ್ಣ ಊರಿನ ಪ್ರಮುಖರು ಚಲವಾದಿ ಕೊಟ್ರೇಶ್ ಬಣಕಾರ್ ಮೂಗಪ್ಪ ಕೌದಿ ಸುರೇಶ್ ಕೆಎಂ ಪ್ರಕಾಶ್ ಸಿ ಸಿದ್ದೇಶ್ ಇತರರು ಭಾಗವಹಿಸಿದ್ದರು.

ವರದಿ : ಎಂ ಪಿ ರಮೇಶ್

# ಮೂಡಲಗಿ ಸರ್ಕಾರಿ ಪ್ರಥಮದರ್ಜೆ ಕಾಲೇಜಿಗೆ ರ್‍ಯಾಂಕ್

**ಮೂಡಲಗಿ :** ಇತ್ತೀಚೆಗೆ ಬೆಳಗಾವಿ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ 12 ನೇ ಘಟಿಕೋತ್ಸವದಲ್ಲಿ 2022–23 ನೇ ಸಾಲಿನ ಮೂಡಲಗಿಯ ಶ್ರೀ ಶ್ರೀಪಾದಬೋಧ ಸ್ವಾಮೀಜಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಬಿ.ಎ ವಿಭಾಗದ ವಿದ್ಯಾರ್ಥಿನಿ ದೀಪಾ ಗಂಗಣ್ಣವರ ಪ್ರತಿಶತ 90.81 ಅಂಕಗಳನ್ನು ಪಡೆದು ವಿಶ್ವವಿದ್ಯಾಲಯಕ್ಕೆ ಎಂಟನೇ ರ್ಯಾಂಕ್ ಗಳಿಸಿ ಘಟಿಕೋತ್ಸವ ಪ್ರಮಾಣಪತ್ರ ಪಡೆದುಕೊಂಡಿದ್ದಾರೆ. ವಿದ್ಯಾರ್ಥಿನಿಯ ಸಾಧನೆಗೆ ಕಾಲೇಜು ಪ್ರಾಂಶುಪಾಲರು, ಸಿ.ಡಿ.ಸಿ.ಯ ಸರ್ವ ಸದಸ್ಯರು, ಬೋಧಕರು ಹಾಗೂ ಬೋಧಕೇತರ ಸಿಬ್ಬಂದಿಯವರು ಹಾಗೂ ವಿದ್ಯಾರ್ಥಿಗಳು ಅಭಿನಂದಿಸಿ ತಿಳಿಸಿ ಶುಭ ಹಾರೈಸಿದ್ದಾರೆ.



# ಪಿಕಾರ್ಡ ಬ್ಯಾಂಕ್ ಅಧ್ಯಕ್ಷರಾಗಿ ಮಮದಾಪೂರ ಉಪಾಧ್ಯಕ್ಷರಾಗಿ ಮೊಖಾಶಿ ಅವಿರೋಧವಾಗಿ ಆಯ್ಕೆ



**ಬಾದಾಮಿ :** ತಾಲೂಕಾ ಪ್ರಾಥಮಿಕ ಸಹಕಾರಿ ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಬ್ಯಾಂಕ್(ಪಿಕಾರ್ಡ) ನಿಯಮಿತ ಬಾದಾಮಿ ನೂತನ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಶುಕ್ರವಾರ ನಡೆದ ಚುನಾವಣೆಯಲ್ಲಿ ಅವಿರೋಧ ಆಯ್ಕೆ ನಡೆಯಿತು.

ಡಿ.27 ರಿಂದ ಮುಂದಿನ ಐದು ವರ್ಷಗಳ ಅವಧಿಗೆ ಅಧ್ಯಕ್ಷರಾಗಿ ಮಹಾಂತೇಶ ಮಮದಾಪೂರ, ಉಪಾಧ್ಯಕ್ಷರಾಗಿ ರಮೇಶ ತುಳಸಿಗೇರಪ್ಪ ಮೊಖಾಶಿ ಇವರನ್ನು ಸರ್ವ ಸದಸ್ಯರು ಅವಿರೋಧವಾಗಿ ಆಯ್ಕೆ ಮಾಡಿದರು.

ಸತತ ಐದನೇ ಬಾರಿಗೆ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗುವ ಮೂಲಕ ಮಹಾಂತೇಶ ಮಮದಾಪೂರ ದಾಖಲೆ ಮಾಡಿದ್ದಾರೆ

ಈ ಸಂದರ್ಭದಲ್ಲಿ ನಿರ್ದೇಶಕರಾದ ರಾಚಪ್ಪ ನಿಲೂಗಲ್, ಎಸ್.ಬಿ.ಕಲಹಾಳ, ರವೀಂದ್ರ ಪಟ್ಟಣಶೆಟ್ಟಿ, ಅಶೋಕ ಜಿಗಳೂರ, ಸುಜಾತಾ ಪ್ರಕಾಶ ಪಟ್ಟಣಶೆಟ್ಟಿ, ಚಂದ್ರಶೇಖರಯ್ಯ ಭೂಸನೂರಮಠ, ರಂಗನಗೌಡ ವೆಂಕನಗೌಡರ, ತೀರ್ಥಪ್ಪ ಗಂಗಶೆಟ್ಟಿ, ಬಾಲಪ್ಪ ಮಾದರ, ಪರಸಪ್ಪ ನಾಯ್ಕರ, ಸುನಂದಾ ಪಾಟೀಲ, ಸಿದ್ದವ್ವ ಅಜ್ಜೋಡಿ ಹಾಜರಿದ್ದರು. ನಂತರ ಫಲಿತಾಂಶವನ್ನು ಎಲ್ಲ ನಿರ್ದೇಶಕರ ಸಮ್ಮುಖದಲ್ಲಿ ಚುನಾವಣಾಧಿಕಾರಿ ಎಸ್.ಕೆ.ಬೆಳವಲದ ಘೋಷಿಸಿದರು. ಮುಖ್ಯ ಕಾರ್ಯನಿರ್ವಾಹಕ ಪಿ.ಎಸ್.ಮಾಳವಾಡ ಹಾಜರಿದ್ದರು.

# ಹಳಿಂಗಳಿ ಹನಗಂಡಿ ಗ್ರಾ.ಪಂ.ಗಳಿಂದ ಹೆಲ್ಮೆಟ್, ಟ್ರ್ಯಾಕ್ ಸೂಟ್ ವಿತರಣೆ



**ತೇರದಾಳ :** ಪ್ರತಿ ವರ್ಷ ರಾಜ್ಯದಲ್ಲಿ 15 ಸಾವಿರ ಜನ ರಸ್ತೆ ಅಪಘಾತದಲ್ಲಿ ಸಾವನ್ನಪ್ಪುತ್ತಿದ್ದು, ಅದರಲ್ಲಿ ಶೇಕಡಾ 60 ರಷ್ಟು ಜನ ದ್ವಿಚಕ್ರ ವಾಹನ ಸವಾರರು ಸಾವನ್ನಪ್ಪುತ್ತಿರುವುದು ನೋವಿನ ಸಂಗತಿ ಎಂದು ಜಮಖಂಡಿಯ ಡಿವೈಎಸ್ಪಿ ಶಾಂತವೀರ ಈ. ಹೇಳಿದರು.

ಅಪರಾಧ ತಡೆ ಮಾಸಾಚರಣೆ ನಿಮಿತ್ಯ ಸ್ಥಳೀಯ ಪೊಲೀಸರಿಗೆ ಹಳಿಂಗಳಿ ಗ್ರಾಮ ಪಂಚಾಯತ್ ವತಿಯಿಂದ ಹೆಲ್ಮೆಟ್ ಹಾಗೂ ಹನಗಂಡಿ ಗ್ರಾಮ ಪಂಚಾಯತ್ ವತಿಯಿಂದ ಕ್ರೀಡಾಕೂಟ ಸಮವಸ್ತ್ರ ವಿತರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ದ್ವಿಚಕ್ರ ವಾಹನದ ಮೇಲೆ ಹೊರಗಡೆ ಹೋಗುವಾಗ ಒಂದು ಬಾರಿ ಮನೆಯವರ ಮುಖ ನೋಡಿಕೊಂಡು ಹೋಗಿ. ನೀವು ಹೆಲ್ಮೆಟ್ ಧರಿಸದೇ ಹೋದಾಗ ಅಪಘಾತಗೊಂಡು ಅನಾಹುತ ಸಂಭವಿಸಿದರೆ ಕುಟುಂಬಸ್ಥರ ಗತಿ ಏನು ಎಂಬುದರ ಬಗ್ಗೆ ಅರಿವು ಇರಲಿ. ಡಿಸೆಂಬರ್ ತಿಂಗಳಲ್ಲಿಯೇ ಅಪರಾಧಗಳು ಹೆಚ್ಚಾಗಿ ನಡೆಯುವುದರಿಂದ ಈ ತಿಂಗಳಲ್ಲಿಯೇ ಅಪರಾಧ ತಡೆ ಮಾಸಾಚರಣೆ ಆಚರಿಸಲಾಗುತ್ತದೆ ಎಂದು ಹೇಳಿದ ಅವರು, ನಾವು ಮಾಡುವ ಆಚರಣೆಗಳಿಂದ ಬೇರೆಯವರಿಗೆ ತೊಂದರೆ ಆಗಬಾರದು. ಬದಲಾಗಿ ಸೌಹಾರ್ದತೆ ಹೆಚ್ಚಾಗಬೇಕು. ಆ ದಿಶೆಯಲ್ಲಿ ಎಲ್ಲರೂ ನಡೆದುಕೊಳ್ಳೋಣ ಎಂದು ಆಶಿಸಿದರು. ಬನಹಟ್ಟಿಯ ಸಿ.ಪಿ.ಐ. ಸಂಜೀವ ಬಳಗಾರ, ಅಪರಾಧ ತಡೆ ಮಾಸಾಚರಣೆ ಕುರಿತು ಶಾಲಾ–ಕಾಲೇಜುಗಳಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮ ನಡೆಸಲಾಗಿದೆ. ಹಣೆ ಬರಹ ಮುಂದೆ ಯಾವುದೂ ಇಲ್ಲ. ಆದರೂ ನಾವು ನಮ್ಮ ಜಾಗೃತಿ ಹಾಗೂ ಕಾನೂನು ಪಾಲನೆಯಲ್ಲಿರಬೇಕೆಂದು ಹೇಳಿದರು. ತೇರದಾಳ ಪಿಎಸ್‌ಐ ಅಪ್ಪಣ್ಣ ಐಗಳಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಗೌತಮ ರೋಡಕರ, ರಾಜು ನಂದೆಪ್ಪನವರ, ಪ್ರಭು ಗಸ್ತಿ, ಶಂಕರ ಕುಂಬಾರ, ಪಿ.ಎಸ್. ಮಾಸ್ತಿ, ದಯಾನಂದ ಕಾಳೆ, ಧನಪಾಲ ಬೋಧೆನ್ನವರ, ಅಲ್ಲಾಬಕ್ಷ ಅಲಾಸ ಮುಂತಾದವರು ತಮ್ಮ ಅಭಿಪ್ರಾಯ ಹಂಚಿಕೊಂಡರು. ವಿದ್ಯಾಧರ ಧರೆನ್ನವರ, ಕೇದಾರಿ ಪಾಟೀಲ, ಸಂಗಮೇಶ ಕಾಲತಿಪ್ಪಿ, ಶಂಕರ ಉಗಾರ, ಮುರಗೇಶ ಮಿರ್ಜಿ, ಸದಾಶಿವ ಹೊಸಮನಿ, ಶ್ರೀಶೈಲ ಮಲಾಬದಿ, ಮಜ್ಜೂರ ಪಕಾಲಿ ಇನ್ನಿತರರು ಭಾಗವಹಿಸಿದ್ದರು.

# ವಿವಿಧ ತರಬೇತಿಗೆ ಅರ್ಜಿ ಅಹ್ವಾನ

**ಬಾಗಲಕೋಟೆ :** ಹೈನುಗಾ–ರಿಕೆ ಮತ್ತು ಎರೆಹುಳು ಗೊಬ್ಬರ ತಯಾರಿಕ ಉಚಿತ ತರಬೇತಿಗೆ ಹಾಗೂ ಮಹಿಳೆಯರಿಗಾಗಿ ವಸ್ತ್ರ ವಿನ್ಯಾಸ (ಹೊಲಿಗೆ) ತರಬೇತಿಗೆ ಅರ್ಜಿ ಆಹ್ವಾನಮಾಡಲಾಗಿದ್ದು. ಕೆನರಾ ಬ್ಯಾಂಕ್ ದೇಶಪಾಂಡೆ ಆರ್‌ಸೆಟ್ ಸಂಸ್ಥೆ, ಹಳಿಯಾಳ, ಉತ್ತರಕನ್ನಡಜಿಲ್ಲೆಯಸಂಸ್ಥೆಯಲ್ಲಿ 18 ರಿಂದ 45 ವಯಸ್ಸಿನ ಗ್ರಾಮೀಣ ಭಾಗದ ನಿರುದ್ಯೋಗ ಯುವಕ/ಯುವತಿಯರಿಗಾಗಿ ಜನೇವರಿ ತಿಂಗಳಲ್ಲಿ ಹೈನುಗಾರಿಕೆ ಮತ್ತು ಎರೆಹುಳು ಗೊಬ್ಬರ ತಯಾ–ರಿಕೆ ಉಚಿತ ತರಬೇತಿಗೆ ಅರ್ಜಿ ಮತ್ತು ಫೆಬ್ರವರಿ ತಿಂಗಳಲ್ಲಿ ಮಹಿಳೆಯರಿಗಾಗಿ ವಸ್ತ್ರ ವಿನ್ಯಾಸ (ಹೊಲಿಗೆ) ಉಚಿತ ತರಬೇತಿಗಳು ಪ್ರಾರಂಭವಾಗಲಿವೆ. ಈ ತರಬೇತಿಗಳು ಸ್ವ–ಉದ್ಯೋಗ ಪ್ರಾರಂಭಿಸಿ, ಸ್ವಾವಲಂಬಿ ಜೀವನ ನಡೆಸಲು ಅನುಕೂಲವಾಗಲಿವೆ. ಈ ತರಬೇತಿಗಳು ಊಟ ವಸತಿಯೊಂದಿಗೆ ಸಂಪೂರ್ಣ ಉಚಿತವಾಗಿರುತ್ತದೆ. ಮೊದಲು ಬಂದವರಿಗೆ ಹಾಗೂ ಗ್ರಾಮೀಣ ಭಾಗದವರಿಗೆ ಮೊದಲ ಆದ್ಯತೆ ನೀಡಲಾಗುವುದು.ತರಬೇತಿಯಲ್ಲಿ ಕೌಶಲ್ಯ, ಸಾಧನಾ ಪ್ರೇರಣಾ ತರಬೇತಿ, ಉದ್ಯಮಶಿಲತೇಯ ದಕ್ಷಗುಣಗಳು, ಹೊಸ ಉದ್ಯಮದ ಸ್ಥಾಪನೆಬಗ್ಗೆ ಮಾಹಿತಿ, ಮಾರುಕಟ್ಟೆ ಸಮೀಕ್ಷೆ, ಮಾರಾಟದ ತಂತ್ರಗಳು. ಯಶಸ್ವಿ ಉದ್ಯಮಗಳಿಂದ ಅನುಭವ ಹಂಚಿಕೆ, ಕ್ಷೇತ್ರ ಭೇಟಿ, ಸಾಫ್ಟ್ ಸ್ಕಿಲ್ಸ್, ಯೋಗ ತರಬೇತಿ ಹಾಗೂ ಬ್ಯಾಂಕಿನಿಂದ ಸಾಲ ಪಡೆದು ಸ್ವ–ಉದ್ಯೋಗ ಪ್ರಾರಂಭಿಸಲು ಬೇಕಾಗುವ ಜ್ಞಾನ, ಸರಕಾರಿ ಯೋಜನೆಗಳು ಮತ್ತು ಯೋಜನಾ ವರದಿ ತಯಾ–ರಿಕೆ ಇನ್ನಿತರ ಮಾಹಿತಿಗಳನ್ನು ಉಚಿತವಾಗಿ ನೀಡಲಾಗುವುದು. ಅಭ್ಯರ್ಥಿಗಳು ತಮ್ಮ ಹೆಸರು, ವಿಳಾಸಗಳನ್ನು ನೊಂದಾಯಿಸಲು ತಿಳಿಸಲಾಗಿದೆ ಆಸಕ್ತರು ನಮ್ಮ ಸಂಸ್ಥೆಯ ಈ ಕೆಳಗಿನ ದೂರವಾಣಿ ಸಂಖ್ಯೆಗಳನ್ನು ಸಂಪರ್ಕಿಸಬಹುದು ಅಥ–ವಾ ಆನ್ಲೈನ ಮೂಲಕ (ವೆಬ್ ಸೈಟ್: www.rsetihaliyal.org) ಅರ್ಜಿ ಸಲ್ಲಿಸಬಹುದು. ತರಬೇತಿಯಲ್ಲಿ ಭಾಗವಹಿಸಲು ಆಸಕ್ತರು ನಿರ್ದೇಶಕರು, ಕೆನರಾ ಬ್ಯಾಂಕ್ ದೇಶಪಾಂಡೆ ಆರ್‌ಸೆಟ್ ಸಂಸ್ಥೆ, ಹಳಿಯಾಳ, ಉತ್ತರ ಕನ್ನಡ ಜಿಲ್ಲೆ ಈ ವಿಳಾಸಕ್ಕೆ ಸಂಪರ್ಕಿಸಲು ಕೋರಲಾಗಿದೆ. ಸಂಸ್ಥೆಯ ದೂರವಾಣಿ ಸಂಖ್ಯೆ: 8970145354, 9483485489, 9482188780 ನಂಬರನ್ನು ಸಂಪರ್ಕಿಸಲು ಸಂಸ್ಥೆಯ ಪ್ರಕಟಣೆಯಲ್ಲಿ ತಿಳಿಸಿದೆ.

# ಜೀವನ ಸಾರ್ಥಕಗೊಳ್ಳಲು ಗುರಿ ಇರಬೇಕು



**ಬೀಳಗಿ :** ವಿದ್ಯಾರ್ಥಿ ಜೀವನ ಉತ್ತಮಗೊಳ್ಳಲು ಮನಸ್ಸು ಅಧೀನದಲ್ಲಿರಬೇಕು. ಶುದ್ಧವಾಗಿರಬೇಕು. ಒಳ್ಳೆಯ ದಾರಿಯಲ್ಲಿ ಸಾಗಬೇಕೆಂದು ಕ್ಷೇತ್ರ ಶಿಕ್ಷಣಾಧಿಕಾರಿ ಆರ್. ಎಸ್. ಆದಾಪೂರ ಕಿವಿ ಮಾತು ಹೇಳಿದರು.

ತಾಲೂಕಿನ ಚಿಕ್ಕಾಲಗುಂಡಿ ಗ್ರಾಮದ ಶ್ರೀ ಸಿದ್ಧಾರೂಢ ಮಠದಲ್ಲಿ ಮಂಗಳೂರು ಯುನಿವರ್ಸಲ್ ನಾಲೇಜ ಟ್ರಸ್ಟ ಹಾಗೂ ಧಾರವಾಡ ಗ್ರಾಮ ವಿಕಾಸ ಸಂಸ್ಥೆಯ ಸಹಯೋಗದಲ್ಲಿ ಜರುಗಿದ ಸರಕಾರಿ ಪ್ರೌಢ ಶಾಲೆ ಚಿಕ್ಕಾಲಗುಂಡಿ, ಅರಕೇರಿ ಮತ್ತು ಕಾತರಕಿ ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಸಕಾರಾತ್ಮಕ ಚಿಂತನೆ ಮೂಲಕ ಸರಳ ಕಲಿಕೆ ಕಾರ್ಯಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನವು ಧನಾತ್ಮಕ ಚಿಂತನೆಗಳ ಮೂಲಕ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಂಡು, ಆಧುನಿಕ ಜಗತ್ತಿನ ಹೊಸ ಸವಾಲುಗಳನ್ನು ಸುಲಭವಾಗಿ ಎದುರಿಸಿ ಯಶಸ್ಸು ಸಾಧಿಸಬೇಕು.

ಜನ್ಮ ನೀಡಿದ ತಂದೆ–ತಾಯಿಗಳ, ಅಕ್ಷರ ಕಲಿಸಿದ ಗುರುವಿನ ಕೀರ್ತಿ ತರುವ ಮೂಲಕ ದೇಶದ ಉತ್ತಮ ನಾಗರಿಕರಾಗಬೇಕೆಂದು ಹೇಳಿದರು.

ಬಾಗಲಕೋಟೆ ಬಿ.ವಿ.ವಿ. ಸಂಘದ ಸದಸ್ಯ ರವಿ ಸಂಜಯ ಸಾವಳಗಿಮಠ ಸಾನಿಧ್ಯ ವಹಿಸಿ ಮಾತನಾಡಿ, ಸಂಸ್ಕಾರ ಇಲ್ಲದ ಶಿಕ್ಷಣ ಎಷ್ಟೇ ಪಡೆದರೂ ವ್ಯರ್ಥ. ಭಾರತೀಯ ಸಂಸ್ಕಾರ, ಸಂಸ್ಕೃತಿಯನ್ನು ಅರಿತುಕೊಂಡು ಮುನ್ನುಗ್ಗಬೇಕು. ಜೊತೆಗೆ ಮೌಲ್ಯಯುತ ಶಿಕ್ಷಣ ಪಡೆದುಕೊಳ್ಳಬೇಕು. ತಂದೆ ತಾಯಿಗಳೆ ಪ್ರಥಮ ಗುರು ಮತ್ತು ಪ್ರತ್ಯಕ್ಷ ದೇವರಾಗಿದ್ದರಿಂದ ಪ್ರತಿನಿತ್ಯ ಅವರಿಗೆ ನಮಸ್ಕರಿಸಿ ಆಶೀರ್ವಾದ ಪಡೆದುಕೊಳ್ಳಬೇಕೆಂದು ಹೇಳಿದರು.

ಧಾರವಾಡ ಗ್ರಾಮ ವಿಕಾಸ ಸಂಸ್ಥೆಯ ಸಂಸ್ಥಾಪಕಿ ಅಶ್ವಿನಿ ನಾಯಕ 550 ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಉಚಿತ ತರಬೇತಿ ನೀಡಿ,

ಯಶಸ್ವಿ ಜೀವನ ನಡೆಸಲು, ಮಕ್ಕಳಲ್ಲಿ ಧನಾತ್ಮಕ ಚಿಂತನೆಯ ಬೆಳವಣಿಗೆಗೆ, ಅಭ್ಯಾಸ ಮಾಡಿ ಸುಲಭವಾಗಿ ನೆನಪಿಟ್ಟುಕೊಳ್ಳುವುದು, ಮೆದುಳಿನ ಸಾಮರ್ಥ್ಯ ಅರಿಯುವುದು, ಅನಗತ್ಯ ಆಲೋಚನೆಗಳನ್ನು ತೆಗೆದು ಹಾಕುವ ವಿಧಾನಗಳನ್ನು ತಿಳಿಸಿದರು.

ಮುಖ್ಯೋಪಾಧ್ಯಾಯ ಎಸ್. ಸಿ. ಕರಿಸೈಯಪ್ಪನವರ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಡಿ. ಎಂ. ಸಾವಕಾರ, ಶಿಕ್ಷಣ ಸಂಯೋಜಕ ಜಗದೀಶ ಖೋತ, ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಸೋಮಶೇಖರ ತಳೇವಾಡ, ಉಪನ್ಯಾಸಕ ವೈ. ಎಸ್. ರೂಗಿ, ಮುಖ್ಯೋಪಾಧ್ಯಾಯರಾದ ಎಸ್. ಎಚ್. ನಾಯಕ, ಆರ್. ವಿ. ಕಟ್ಟಿ, ಎಸ್ಡಿಎಂಸಿ ಸದಸ್ಯರು ಉಪಸ್ಥಿತರಿದ್ದರು. ಚಂದ್ರಶೇಖರ ಪರಸಗೊಂಡ ಸ್ವಾಗತಿಸಿದರು. ಶಿಕ್ಷಕ ರವಿಶಂಕರ ನಿರೂಪಿಸಿದರು. ದಾನಮ್ಮ ನಾಯನೇಗಲಿ ವಂದಿಸಿದರು.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State